ಖಾಸಗಿ ಪ್ರಸಾರ



# ಶ್ರೀದೇವಿ ಅಂತರಂಗ

ಸೇವೆ - ಶಿಕ್ಷಣ - ಅಧ್ಯಾತ್ಮದ ಜೊತೆಗೆ ಪಯಣ

ಮಾಸಪತ್ರಿಕೆ
ಸಂಪುಟ 3, ಸಂಚಿಕೆ 7, ಮೇ 2025

SHRIDEVI ANTARANGA
Monthly Magazine




SHRIDEVI EDUCATION

ಸಂಪಾದಕರು: ಡಾ. ಎಂ.ಆರ್. ಹುಲಿನಾಯ್ಕರ್ ಗೌರವ ಸಂಪಾದಕರು: ಡಾ. ಕೆ.ಆರ್.ಕಮಲೇಶ್ ಕಾರ್ಯನಿರ್ವಾಹಕ ಸಂಪಾದಕರು: ಡಾ. ರಮಣ ಎಂ. ಹುಲಿನಾಯ್ಕರ್ ಇಂಗ್ಲಿಷ್ ಆವೃತ್ತಿ ಸಂಪಾದಕರು: ಕೃಷ್ಣ ವಿ.




ಸಂಪಾದಕರ ಅಂತರಂಗ

ಡಾ. ಎಂ.ಆರ್. ಹುಲಿನಾಯ್ಕರ್
ಸಂಸ್ಥಾಪಕ ಅಧ್ಯಕ್ಷರು
ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಮೂಹ

## ಭಯೋತ್ಪಾದಕರ ಅಮಾನುಷ ಕೃತ್ಯ ಖಂಡನೀಯ





### ಭಯಾನಕ ಮಂಗಳವಾರ

ಏಪ್ರಿಲ್ 22ರಂದು ಪಹಲ್ಗಾಮ್‌ನಲ್ಲಿ ಭಯೋತ್ಪಾದಕರು ನಡೆಸಿದ ಅಮಾನುಷಕೃತ್ಯದಿಂದ ಇಡೀ ಮಾನವಜನಾಂಗವೇ ಅವಮಾನದಿಂದ ತಲೆಯನ್ನು ತಗ್ಗಿಸುವಂತೆ ಆಗಿದೆ. ಮನುಷ್ಯರು ಎನಿಸಿಕೊಂಡವರು ಈ ಬಗೆಯ ಹೀನಕೃತ್ಯವನ್ನು ಎಸಗಬಹುದೆಂಬುದನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಇದನ್ನು 'ಶ್ರೀದೇವಿ ಅಂತರಂಗ'ವು ಬಲವಾಗಿ ಖಂಡಿಸುತ್ತದೆ ಮತ್ತು ಈ ಭೀಕರ ಕೃತ್ಯದಿಂದ ಪ್ರಾಣವನ್ನು ಕಳೆದುಕೊಂಡವರ ಆತ್ಮಕ್ಕೆ ಶಾಂತಿಗಾಗಿ ಪ್ರಾರ್ಥಿಸುತ್ತದೆ ಹಾಗೂ ಆಘಾತಕ್ಕೆ ಈಡಾಗಿರುವ ಅವರ ಕುಟುಂಬವರ್ಗದವರಿಗೆ ತನ್ನ ಹೃದಯಪೂರ್ವಕ ಸಂತಾಪವನ್ನು ವ್ಯಕ್ತಪಡಿಸುತ್ತದೆ. ನುನ್‌ವಾನ್‌ನಲ್ಲಿ 2000ದಲ್ಲಿ ನಡೆದ ಅನಂತರ, ಇಂತಹ ಹೇಯಕೃತ್ಯವು ಭಾರತದಲ್ಲಿ ನಡೆದಿರಲಿಲ್ಲ. ಆದರೆ, ಈಗ ಅದು ನಮ್ಮ ಎದುರಿನಲ್ಲಿಯೇ ನಡೆದಿದೆ.

ಕಳ್ಳತನದಿಂದ ದೇಶದೊಳಕ್ಕೆ ನುಗ್ಗಿ ಈ ಭಯೋತ್ಪಾದಕರು ನಡೆಸಿದ ಪೈಶಾಚಿಕ ಘಟನೆಯು ಇಡೀ ದೇಶದಲ್ಲಿ ಪ್ರತಿಯೊಬ್ಬರ ಹೃದಯವನ್ನೂ ಕಲಕಿದೆ, ಕ್ಷುಬ್ಧಗೊಳಿಸಿದೆ. ದೇಶದೆಲ್ಲೆಡೆ ಮಾನವೀಯತೆಯೇ ಈಗ ಸಂತ್ರಸ್ತರ ಪರವಾಗಿ ನ್ಯಾಯಕ್ಕಾಗಿ ತನ್ನ ಕೂಗನ್ನೆತ್ತಿದೆ.

ಕಾಶ್ಮೀರ ಕಣಿವೆಯಲ್ಲಿರುವ ಪಹಲ್ಗಾಮಿನ ಬೈಸರಾನ್ ಹುಲ್ಲುಗಾವಲಿನಲ್ಲಿ ತಮ್ಮ ರಜಾಕಾಲವನ್ನು ಆನಂದವಾಗಿ ಹಲವಾರು ಪ್ರವಾಸಿಗರು ಕಳೆಯುತ್ತಿದ್ದರು. ಟೀ ಮತ್ತು ಅಲ್ಪಾಹಾರವನ್ನು ಸೇವಿಸುತ್ತಿದ್ದ ಅವರ ಆ ಸಂತೋಷ ಕ್ಷಣಿಕವಾಗಿತ್ತು. ಪಕ್ಕದ ಕಾಡಿನಿಂದ ಬಂದ ಕೆಲವೇ ಕೆಲವು ಪೈಶಾಚಿಕ ಉಗ್ರರು ಅವರ ಮೇಲೆ ದಾಳಿ ಮಾಡಿದರು. ಮಧ್ಯಾಹ್ನ 2.45ರ ವೇಳೆಗೆ ಸೈನಿಕರ ವೇಷದಲ್ಲಿ ಬಂದ ಆ ಉಗ್ರರು ಮೊದಲಿಗೆ ಪ್ರವಾಸಿಗರ ಗುಂಪಿನಿಂದ ಮುಸ್ಲಿಮರನ್ನು ಬೇರ್ಪಡಿಸಿ ಉಳಿದವರು ಮುಸ್ಲಿಮರಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲು ಕಲ್ಮಾ ಅಥವಾ ಖುರಾನಿನ ಕೆಲವು ಪದ್ಯಗಳನ್ನು ಪಠಿಸಲು ಆದೇಶಿಸಿದರು. ಆ ಗುಂಪಿನಲ್ಲಿದ್ದವರು ಕಾಫಿರರೆಂದು ಖಾತ್ರಿ ಪಡಿಸಿಕೊಂಡ ಅನಂತರ ಬಹಳ ಸಮೀಪದಿಂದ ಇಪ್ಪತ್ತಾರು ಪುರುಷ ಪ್ರವಾಸಿಗರ ತಲೆ ಮತ್ತು ಎದೆಗೆ ಗುಂಡಿಟ್ಟು ಅವರನ್ನು ಅಲ್ಲಿಯೇ ಕೊಂದರು. ಹಿಂಸೆಯಷ್ಟೇ ಅವರ ಗುರಿಯಾಗಿರಲಿಲ್ಲ, ಮತೀಯವಾಗಿ ಭಾರತೀಯರನ್ನು ಕೆರಳಿಸುವುದು ಮತ್ತು ಈ ಪ್ರಪಂಚದಲ್ಲಿ ವಿವಿಧ ಮತಗಳು ಸಹಿಷ್ಣುತೆಯಿಂದ ಮತ್ತು ಅನ್ಯೋನ್ಯವಾಗಿ ಬಾಳುವುದು ಒಂದು ಮಿಥ್ಯ ಎನ್ನುವುದನ್ನು ಭಾರತಕ್ಕೆ ಹಾಗೂ ಇತರ ದೇಶಗಳಿಗೆ ಸಾರುವುದು ಅವರ ಉದ್ದೇಶವಾಗಿತ್ತು.

▶▶ 2ನೇ ಪುಟಕ್ಕೆ...

# ಇಂಜಿನಿಯರಿಂಗ್ ಶಿಕ್ಷಣದಲ್ಲಿ ಸ್ಕಿಲ್ ಲ್ಯಾಬ್‌ಗಳ ಮಹತ್ತ್ವ

■ ಡಾ. ಎಲ್. ಗಿರೀಶ್
ಎಐ&ಡಿಎಸ್ (ಆರ್ಟಿಫಿಷಿಯಲ್ ಇಂಟಲಿಜೆನ್ಸ್ & ಡೇಟಾ ಸೈನ್ಸ್) ವಿಭಾಗದ ಮುಖ್ಯಸ್ಥರು

ಮೂರು ದಶಕಗಳ ಹಿಂದೆ ತುಮಕೂರಿನ ಹೊರವಲಯ ಶಿರಾ ರಸ್ತೆಯಲ್ಲಿ ಆರಂಭವಾದ ಶ್ರೀದೇವಿ ಎಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳ ಪಾಲಿಗೆ ಸರಸ್ವತಿಯ ದೇವಾಲಯವಾಗಿದೆ. ಎಲ್.ಕೆ.ಜಿಯಿಂದ ಪ್ರಾರಂಭಿಸಿ ಮೆಡಿಕಲ್, ಇಂಜಿನಿಯರಿಂಗ್ ಹಾಗೂ ಎಂ.ಬಿ.ಎ.ಯ ವರೆಗೆ ಒಂದೇ ಎಡೆಯಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಕಲಿಕೆಯ ತಾಣವಾಗಿದೆ ಈ ಕ್ಯಾಂಪಸ್.

ಜಗತ್ತಿನಲ್ಲಿ ಅತಿ ಹೆಚ್ಚು ಇಂಜಿನಿಯರ್‌ಗಳನ್ನು ರೂಪಿಸಿಸುವ ದೇಶಗಳ ಸಾಲಿನಲ್ಲಿ ಭಾರತವೇ ಅಗ್ರಮಾನ್ಯ. ಇದು ಒಳ್ಳೆಯ ವಿಚಾರವೇ ಆಗಿದ್ದರೂ, ಕೌಶಲ, ಗುಣಮಟ್ಟ ಎರಡರಲ್ಲೂ ದೇಶದ ವಿದ್ಯಾರ್ಥಿಗಳು ಬಹಳ ಹಿಂದಿರುವುದು ಅಷ್ಟೇ ನೋವು, ವಿಷಾದವನ್ನು ತರುವ ಸಂಗತಿ.

ಒಂದು ಅಂದಾಜಿನ ಪ್ರಕಾರ ಉದ್ಯೋಗಕ್ಕೆ ಅಗತ್ಯವಾಗಿರುವ ಕೌಶಲಗಳನ್ನು ಗಳಿಸಿಕೊಂಡ ಇಂಜಿನಿಯರ್‌ಗಳ ಲಭ್ಯತೆಯ ಪ್ರಮಾಣ ಕೇವಲ ಶೇಕಡ 6 ರಿಂದ 7 ಎಂದರೆ, ಗುಣಮಟ್ಟವನ್ನು ಹೆಚ್ಚಿಸಲು ನಾವು ಎಷ್ಟು ಪ್ರಾಮುಖ್ಯವನ್ನು ಕೊಡಬೇಕು ಎಂಬುದು ಚಿಂತನೆಯ ವಿಷಯವಾಗಿದೆ.

ದೇಶಾದ್ಯಂತ ಎಂಟು ಸಾವಿರಕ್ಕೂ ಹೆಚ್ಚು ಇಂಜಿನಿಯರಿಂಗ್ ಕಾಲೇಜುಗಳಿವೆ. ಕರ್ನಾಟಕದಲ್ಲಿ ಶತಮಾನ ಪೂರೈಸಿದ ಕಾಲೇಜು ಸೇರಿದಂತೆ ಸುಮಾರು 250ಕ್ಕೂ ಹೆಚ್ಚು ಕಾಲೇಜುಗಳಿವೆ. ಇದರಲ್ಲಿ ಅನುದಾನ ರಹಿತ, ಅನುದಾನ ಸಹಿತ ಖಾಸಗಿ ವಿಶ್ವವಿದ್ಯಾನಿಲಯದ ಕಾಲೇಜುಗಳು ಸೇರಿವೆ.

> “ ಕಾಲೇಜಿನ ಸಂಸ್ಥಾಪಕ ಅಧ್ಯಕ್ಷ ಡಾ ಎಂ.ಆರ್. ಹುಲಿನಾಯ್ಕರ್ ವಿದ್ಯಾರ್ಥಿಗಳಲ್ಲಿ ಸ್ಪರ್ಧೆಯ ಮನೋಭಾವ ಪ್ರೋತ್ಸಾಹಿಸಲು ಪ್ರಾಜೆಕ್ಟ್ ಎಕ್ಸಿಬಿಷನ್ ಆಯೋಜಿಸಿ ಪ್ರತಿ ತರಗತಿಯ ವಿದ್ಯಾರ್ಥಿಗಳಿಗೆ ಇಪ್ಪತ್ತೈದು ಸಾವಿರ ರೂ. ನಗದು ಬಹುಮಾನ ನೀಡುತ್ತಿದ್ದಾರೆ. ಈ ಪ್ರಾಜೆಕ್ಟ್ ಎಕ್ಸಿಬಿಷನ್‌ನಲ್ಲಿ ಸುಮಾರು ನೂರಕ್ಕೂ ಹೆಚ್ಚು ಕಾಲೇಜು ವಿದ್ಯಾರ್ಥಿಗಳು ಪ್ರತಿಭೆ ಪ್ರದರ್ಶಿಸಿರುವುದು ಸಂತೋಷದ ಸಂಗತಿ, ಇದಕ್ಕಾಗಿ ಅಧ್ಯಾಪಕರು, ವಿದ್ಯಾರ್ಥಿಗಳ ಪರವಾಗಿ ಆಡಳಿತ ಮಂಡಳಿಗೆ ತುಂಬು ಹೃದಯದ ಅಭಿನಂದನೆ.



ಮೇಘಾಲಯದ ರಾಜ್ಯಪಾಲರಾದ ಗೌರವಾನ್ವಿತ ಸಿ.ಎಸ್.ವಿಜಯಶಂಕರ್ ಅವರಿಂದ ಸ್ಕಿಲ್ ಲ್ಯಾಬ್ ಉದ್ಘಾಟನೆ.

2024–25ನೇ ಶೈಕ್ಷಣಿಕ ವರ್ಷದಲ್ಲಿ ರಾಜ್ಯಕ್ಕೆ ಒಂದು ಲಕ್ಷದ ಮೂವತ್ತೆರಡು ಸಾವಿರ ಸೀಟುಗಳು ಲಭ್ಯವಾಗಿದ್ದು, 62 ಸಾವಿರ ಸೀಟುಗಳು ಸರ್ಕಾರಿ ಕೋಟಾದಲ್ಲಿ, 26 ಸಾವಿರ ಸೀಟುಗಳು ಕಾಮೆಡ್–ಕೆ ಕೋಟಾದಲ್ಲಿವೆ. ಉಳಿದ 5 ಸಾವಿರಕ್ಕೂ ಹೆಚ್ಚು ಸೀಟುಗಳು, ಸೂಪರ್‌ನ್ಯೂಮರರಿ ಕೋಟಾದಲ್ಲಿವೆ.

ಪ್ರತಿ ವರ್ಷ ಲಕ್ಷಾಂತರ ಎಂಜಿನಿಯರ್‌ಗಳು ಪದವಿ ಮುಗಿಸಿ ಕಾಲೇಜಿನಿಂದ ಹೊರಗೆ ಬರುತ್ತಿದ್ದಾರೆ. ಆದರೆ ಅವರಲ್ಲಿ ಉದ್ಯಮಗಳ ನಿರೀಕ್ಷೆಗೆ ತಕ್ಕಂತಹ ಹೆಚ್ಚಿನ ಕೌಶಲ ಇಲ್ಲದೇ ಇರುವುದು ದೊಡ್ಡ ಸಮಸ್ಯೆಯಾಗಿದೆ. ದೇಶದಲ್ಲಿ ಕಾಲೇಜುಗಳ ಸಂಖ್ಯೆ ಹೆಚ್ಚಾಗುತ್ತಿದೆಯೇ ಹೊರತು ಗುಣಮಟ್ಟ, ಉದ್ಯಮಗಳ ಇಂದಿನ ಅಗತ್ಯಗಳನ್ನು ಪೂರೈಸುವ ಕುಶಲ ಎಂಜಿನಿಯರ್‌ಗಳನ್ನು ರೂಪಿಸುವಲ್ಲಿ ವಿಫಲವಾಗಿರುವುದೇ ಇದಕ್ಕೆ ಮೂಲ ಕಾರಣ.

▶▶ 6ನೇ ಪುಟಕ್ಕೆ...

### ಹುಟ್ಟುಹಬ್ಬದ ಸಂಭ್ರಮ



ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ 93ನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ ಶ್ರೀದೇವಿ ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್ ಅವರಿಂದ ಸನ್ಮಾನ ಮತ್ತು ಅಭಿನಂದನೆ.

### ಬಿಜೆಪಿ ರಾಜ್ಯಾಧ್ಯಕ್ಷರ ಭೇಟಿ



ತುಮಕೂರಿನ ಶ್ರೀದೇವಿ ವಿದ್ಯಾಸಂಸ್ಥೆಯ ಅಧ್ಯಕ್ಷರೂ ಹಾಗೂ ಮಾಜಿ ವಿಧಾನ ಪರಿಷತ್ ಸದಸ್ಯರಾದ ಡಾ. ಎಂ.ಆರ್. ಹುಲಿನಾಯ್ಕರ್‌ರವರ ನಿವಾಸಕ್ಕೆ ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ವಿಜಯೇಂದ್ರರವರು ಭೇಟಿ ನೀಡಿದರು. ಇದೇ ಸಂದರ್ಭದಲ್ಲಿ ಡಾ. ರಮಣ್ ಎಂ ಹುಲಿನಾಯ್ಕರ್, ಬಿಜೆಪಿ ರಾಜ್ಯ ಕಾರ್ಯದರ್ಶಿಗಳಾದ ಶ್ರೀಮತಿ ಅಂಬಿಕಾ ಹುಲಿನಾಯ್ಕರ್, ಎಂ.ಎಸ್. ಪಾಟೀಲ್, ಡಾ.ಲಾವಣ್ಯ ಮುಂತಾದವರು ಉಪಸ್ಥಿತರಿದ್ದರು.

▶▶ ಮೊದಲನೇ ಪುಟದಿಂದ

# ಭಯೋತ್ಪಾದಕರ ಅಮಾನುಷ ಕೃತ್ಯ ಖಂಡನೀಯ

ಅವರು ಎಷ್ಟು ನಿರ್ದಯಿಗಳಾಗಿದ್ದರೆಂದರೆ, ಅಲ್ಲಿ ಕರುಣಾಮಯವಾಗಿ ಆಕ್ರಂದನ ಮಾಡುತ್ತಿದ್ದ ಹೆಂಗಸರ ಮತ್ತು ಮಕ್ಕಳ ದನಿಯು ಅವರ ಕಿವಿಗೆ ಕೇಳಿಸಲೇ ಇಲ್ಲ. ಬದಲಿಗೆ, ಅವರತ್ತ ತಿರುಗಿ ಅವರನ್ನು ತುಚ್ಛೀಕರಿಸುವಂತಹ ತಿರಸ್ಕಾರದ ನಗೆಯನ್ನು ನಗುತ್ತ, ಅವರ ಹೃದಯಕ್ಕಾಗಿದ್ದ ಗಾಯದ ಮೇಲೆ ಬರೆಯೆಳೆಯುವಂತೆ ಈ ಮಹಿಳೆಯರು ಮತ್ತು ಮಕ್ಕಳಿಗೆ ಮೋದಿಗೆ ತಮ್ಮ ಈ ಸಾಹಸವನ್ನು ತಿಳಿಸಿ ಎಂದು ಹೇಳಿದರೆಂದು ವರದಿಯಾಗಿದೆ. ಇಂತಹ ಭಯಾನಕ ಮತ್ತು ಅಮಾನವೀಯವಾದ ಕೃತ್ಯದ ಚಿತ್ರಗಳು ಪ್ರಕಟಗೊಳ್ಳುತ್ತಿದ್ದ ಹಾಗೆಯೇ ಪ್ರಪಂಚದ ಇಡೀ ಪ್ರಜ್ಞಾವಂತ ಜನರು ಆಘಾತಕ್ಕೆ ಒಳಗಾಗಿದ್ದರು. ಈ ಹೇಯ ಕೃತ್ಯವನ್ನು ಪಾಕಿಸ್ತಾನದ ಲಷ್ಕರ್–ತಯ್ಯಬಾ ಸಂಸ್ಥೆಯು ತಾನೇ ಮಾಡಿದುದೆಂದು ಹೇಳಿಕೊಂಡಿದೆ ಎಂಬುದು ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿದೆ.


ಮಾನವರ ಮಿದುಳಿನಲ್ಲಿ ಮೃಗೀಯ ಗುಣಗಳ ಬೇರು ಇರುತ್ತವೆ ಎಂಬುದು ಸಾಮಾನ್ಯವಾಗಿ ತಿಳಿದ ವಿಷಯವೇ. ಆದರೆ, ಈ ಭಯೋತ್ಪಾದನೆಯ ಗುಣಗಳು, ಪರರ ಬದುಕನ್ನೇ ಹಾಳು ಮಾಡಲು ಎಷ್ಟು ಪಾತಾಳಕ್ಕೆ ಇಳಿಯಬಹುದು, ಮಾನವರು ಪೌರಾಣಿಕ ರಾಕ್ಷಸರನ್ನು ಅಣಕಿಸುವ ಮಟ್ಟಿನ ಪೈಶಾಚಿಕ ಕೃತ್ಯಗಳನ್ನು ಎಸಗಬಹುದು ಎಂಬ ವೈಚಿತ್ರ್ಯವು ಮನಶ್ಶಾಸ್ತ್ರಕ್ಕೆ ಅಧ್ಯಯನ ವಿಷಯವಾಗುತ್ತದೆ. ಆದರೆ, ನಾವು ಇಷ್ಟನ್ನು ಹೇಳಬಹುದು, ಯಾವುದೇ ದೇಶವು ಹಲವಾರು ದಶಕಗಳ ಕಾಲ ಒಂದೇ ಮನೋಭಾವದ ಕ್ರೂರವ್ಯಕ್ತಿಗಳ ಆಡಳಿತಕ್ಕೆ ಒಳಪಟ್ಟರೆ, ಸಾಮಾನ್ಯ ಜನರ ಮನೋಭಾವವೂ ಅವರನ್ನಾಳುವ ಆ ರಾಕ್ಷಸರ ಮನೋಭಾವದ ಪಡಿಯಚ್ಚೇ ಆಗಿಬಿಡುತ್ತದೆ. ಅಂತಹ ಆಡಳಿತಗಾರರು ಸಾಮಾನ್ಯಜನರ ಮನಃಸ್ಥಿತಿಯನ್ನು ಮತ್ತು ತಲೆತಲಾಂತರದಿಂದ ಬಂದ ಅವರ ಸಂಸ್ಕೃತಿಯನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬದಲಾಯಿಸಬಲ್ಲರು. ಭಯೋತ್ಪಾದನೆಯನ್ನೇ ಉದ್ಯೋಗವನ್ನಾಗಿ ಮಾಡಿಕೊಂಡಿರುವ ದೇಶಗಳಲ್ಲಿನ ಜನರು ಸ್ವಾಭಾವಿಕವಾಗಿಯೇ ಭಯೋತ್ಪಾದನೆಯನ್ನು ಅಪ್ಪಿಕೊಳ್ಳುತ್ತಾರೆ, ಭಯೋತ್ಪಾದನೆಯ ಲಯಕ್ಕೆ ತಾಂಡವನೃತ್ಯವನ್ನಾಡುತ್ತಾರೆ, ಅದಕ್ಕೆ ಸಂಬಂಧಿಸಿದ ತಮ್ಮ ಕೃತ್ಯಗಳನ್ನು – ಆ ಕೃತ್ಯಗಳು ಅವರನ್ನೇ ನುಂಗುವಂತಾದರೂ ಅವನ್ನೇ –ಮನಃಪೂರ್ವಕವಾಗಿ ಆನಂದಿಸುತ್ತಾರೆ. ಈ ಮನೋಭಾವವನ್ನು ಸೃಷ್ಟಿಕರ್ತನೇ ಬಂದರೂ ಬದಲಾಯಿಸಲು ಸಾಧ್ಯವಿಲ್ಲ. ಆ ದೇಶಗಳ ಯುವಕರು, ತಮ್ಮ ಜೀವದ ಹಂಗನ್ನೂ ತೊರೆದು, ಸ್ವಸಂತೋಷದಿಂದ ಆ ರಾಕ್ಷಸರ ಪಡೆಗೆ ಸೇರಿಕೊಳ್ಳುತ್ತಾರೆ.




ಆದರೆ, ನಾನೀಗ ಈ ಲೇಖನವನ್ನು ಬರೆಯುತ್ತಿರುವುದು, ಇಂತಹ ಭಯೋತ್ಪಾದನೆಗೆ ಏಪ್ರಿಲ್ 22ರಂದು ತುತ್ತಾದ ನಮ್ಮ ಸಹೋದರರ ಬಗೆಗೆ, ಅವರು ಅನುಭವಿಸಿದ ಯಮಯಾತನೆಗಳ ಬಗೆಗೆ ಮತ್ತು ಅವರ ಕುಟುಂಬ ವರ್ಗದವರು ಅನುಭವಿಸುತ್ತಿರುವ ಮತ್ತು ಜೀವಮಾನಪೂರ್ತಿ ಅವರು ಅನುಭವಿಸ ಬೇಕಾಗಿರುವ ದುಃಸ್ಥಿತಿಗಳ ಬಗೆಗೆ,ಅಂದು ಕೆಲವು ಭಾರತೀಯ ಪ್ರವಾಸಿಗರು ಕಾಶ್ಮೀರದ ಪೆಹಲ್ಗಾಮ್‌ನಲ್ಲಿ ವಿಹಾರಾರ್ಥವಾಗಿ ಹೋಗಿದ್ದಾಗ ಅಲ್ಲಿ ಅವರಲ್ಲಿದ್ದ ಪುರುಷರನ್ನು ಮತೀಯ ಆಧಾರದ ಮೇಲೆ ಕೊಲೆ ಮಾಡಿದ ಹೇಯ ಘಟನೆಯ ಬಗೆಗೆ.

## ಭದ್ರತಾ ವೈಫಲ್ಯ

ಸಂಬಂಧಿತ ಸರ್ಕಾರದ ಭದ್ರತಾ ವೈಫಲ್ಯವು ಈ ಪ್ರಕರಣದಲ್ಲಿ ಆಗಿರುವುದರಲ್ಲಿ ಯಾವುದೇ ಸಂದೇಹವೂ ಇಲ್ಲ. ಭದ್ರತಾ ಸಿಬ್ಬಂದಿಗಳು ಆ ಸ್ಥಳದಲ್ಲಿ ಇದ್ದಿದ್ದರೆ, ಸಂಭವಿಸಿದ ದುರಂತದ




ವಿಂಗ್ ಕಮಾಂಡರ್ ವ್ಯೋಮಿಕಾ ಸಿಂಗ್ ಮತ್ತು ಕರ್ನಲ್ ಸೋಫಿಯಾ ಖುರೇಷಿ.

ಪ್ರಮಾಣ ಕಡಮೆಯಾಗುತ್ತಿತ್ತು ಅಥವಾ ಆ ಪ್ರಕರಣ ಸಂಭವಿಸುತ್ತಲೇ ಇರಲಿಲ್ಲ ಎನ್ನುವುದು ಖಚಿತ. ಈ ವೈಫಲ್ಯದ ಕಾರಣವು ತನಿಖೆಯ ಅನಂತರವೇ ತಿಳಿಯುತ್ತದೆ. ಆದರೆ ಈ ವೈಫಲ್ಯವನ್ನು ಕುರಿತು, ಈ ಸಮಯದಲ್ಲಿ ಆರೋಪ–ಪ್ರತ್ಯಾರೋಪವನ್ನು ಮಾಡಿ, ನಡೆದಿರುವ ಪ್ರಕರಣದ ದಾರುಣ ಪರಿಣಾಮವನ್ನು ದುರ್ಬಲವಾಗಿ ಕಾಣುವಂತೆ ಮಾಡುವ ಕೆಲವು ರಾಜಕೀಯ ವ್ಯಕ್ತಿಗಳ ನಡೆ ಖಂಡನೀಯ.

## ಭಯೋತ್ಪಾದಕರ ಆಶ್ರಯ ಸ್ಥಾನ

ಕಳೆದ ಹಲವಾರು ದಶಕಗಳಿಂದ ನಮ್ಮ ನೆರೆಯ ರಾಷ್ಟ್ರ ಪಾಕಿಸ್ತಾನವು ತಮ್ಮ ಜನರ ಕಲ್ಯಾಣ ಕಾರ್ಯಗಳಿಗೆ, ತಮ್ಮ ದೇಶದ ಅಭಿವೃದ್ಧಿಗೆ ಬಳಸಬೇಕಾದ ಸಂಪತ್ತನ್ನೆಲ್ಲಾ ಭಯೋತ್ಪಾದಕರನ್ನು ತಯಾರು ಮಾಡಿ ವಿವಿಧ ದೇಶಗಳಿಗೆ, ಅದರಲ್ಲಿಯೂ ಭಾರತಕ್ಕೆ, ರಫ್ತು ಮಾಡುವುದರಲ್ಲಿಯೇ ತಲ್ಲೀನವಾಗಿದೆ. ತಮ್ಮ ಜನಪ್ರಿಯತೆಯನ್ನು ಕಾಪಾಡಿಕೊಂಡು ಬರಲು ಹಾಗೂ ತಮ್ಮ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಆ ದೇಶವನ್ನು ಆಳಿದ ಪ್ರತಿಯೊಬ್ಬರೂ, ಪ್ರತಿಯೊಬ್ಬ ಸೇನಾಪ್ರಮುಖರೂ ಎಂದೋ ನಿರ್ಧಾರವಾಗಿರುವ ಕಾಶ್ಮೀರದ ಸಮಸ್ಯೆಯನ್ನು ಇಂದೂ ಕಾಡ್ಗಿಚ್ಚು ಮಾಡಿಕೊಂಡು ಬರುತ್ತಿದ್ದಾರೆ. ಇದಕ್ಕೆ ಪೂರಕವಾಗಿ ಭಯೋತ್ಪಾದಕರನ್ನು ಬೆಳೆಸುತ್ತಿದ್ದಾರೆ ಮತ್ತು ತಮ್ಮ ದೇಶವನ್ನು ಭಯೋತ್ಪಾದಕರ ಆಶ್ರಯಸ್ಥಾನವನ್ನಾಗಿ ಮಾಡಿದ್ದಾರೆ. ಈ ವಿಷಯವನ್ನು ಆ ದೇಶದ ರಕ್ಷಣಾಖಾತೆಯ ಸಚಿವ ಖ್ವಾಜಾ ಅಸೀಫ್ ಅವರೇ ಒಪ್ಪಿಕೊಂಡು, 'ಭಯೋತ್ಪಾದನೆಯನ್ನು ಪೋಷಿಸಿ ಬೆಳೆಸುವ ಹೊಲಸು ಕಾರ್ಯವು ಪಾಕಿಸ್ತಾನದ ಚರಿತ್ರೆಯ ಒಂದು ಭಾಗವೇ ಆಗಿದೆ, ಇದು ಕೆಲವು ಪಾಶ್ಚಿಮಾತ್ಯ ದೇಶಗಳ ನೆರವಿನಿಂದ ಮಾಡಲಾಗಿದೆ' ಎಂದು ಹೇಳಿದ್ದಾರೆ. ಈಗ ಅದರ ಫಲವನ್ನು ಅನುಭವಿಸಬೇಕಾದ ಕಾಲ ಪಾಕಿಸ್ತಾನಕ್ಕೆ ಬಂದಿದೆ. ಇಲ್ಲಿಯವರೆಗೆ ಭಾರತವು ಪಾಕಿಸ್ತಾನಕ್ಕೆ 'ಕಠಿಣಕ್ರಮ'ದ ಎಚ್ಚರಿಕೆಯನ್ನು ನೀಡುತ್ತಾ ಯಾವುದೇ ಕಠಿಣ ಕ್ರಮವನ್ನು ತೆಗೆದುಕೊಳ್ಳದೆ, 'ಶಾಂತಿಪಾಠ'ವನ್ನು ಪಠಿಸುತ್ತಾ ಬಂದಿತ್ತು. ಮಾನವೀಯ ಮೌಲ್ಯಗಳನ್ನೆಲ್ಲಾ ಕಳೆದುಕೊಂಡಿರುವ ಪಾಕಿಸ್ತಾನಕ್ಕೆ ಪ್ರಧಾನಿ



ವಾಜಪೇಯಿಯವರು ತೋರಿದ ಮಾನವೀಯ ಧೋರಣೆಯಾಗಲೀ, ಮೋದೀಜಿ ಅವರು ತಮ್ಮ ಅಧಿಕಾರಾವಾವಧಿಯ ಮೊದಲ ದಿನವೇ ನೀಡಿದ ಸ್ನೇಹಹಸ್ತದ ಔದಾರ್ಯವಾಗಲೀ ಅರ್ಥವಾಗಲಿಲ್ಲ. ಆದರೆ ಈಗ ಪ್ರಧಾನಿ ಮೋದೀಜಿ ಸಹನೆಯನ್ನು ಕಳೆದುಕೊಂಡು ತೀವ್ರವಾದ ದುರ್ಭರ ಕ್ರಮವನ್ನು ತೆಗೆದುಕೊಳ್ಳಲು ನಿರ್ಧರಿಸಿದ್ದಾರೆ ಮತ್ತು ಅದಕ್ಕೆ ದೇಶದ ಸಮಸ್ತ ಜನರ ಬೆಂಬಲವೂ ದೊರೆತಿದೆ.

ಆದರೆ, ಈಗ ಯುದ್ಧವು ನಮ್ಮ ದೇಶಕ್ಕೆ ಅನಿವಾರ್ಯವಾಗಿದ್ದರೂ ಅದರ ಪರಿಣಾಮಗಳನ್ನು ವಿಶ್ಲೇಷಿಸುವುದನ್ನು ನಾನು ಮುಂದೂಡುತ್ತಿದ್ದೇನೆ. ಸದ್ಯ ಈ ಲೇಖನದಲ್ಲಿ ಕಳೆದ ತಿಂಗಳು ನಡೆದ ದುರ್ಘಟನೆಯ ಮೇಲೆ ಗಮನವನ್ನು ಕೇಂದ್ರೀಕರಿಸುತ್ತಿದ್ದೇನೆ.

ಈ ಘಟನೆಗೆ ಸಂಬಂಧಿಸಿದ ಉಗ್ರರನ್ನು ಹಾಗೂ ಅವರನ್ನು ಪೋಷಿಸಿ, ಪ್ರಚೋದಿಸಿದವರನ್ನು ಅವರು ಜಗತ್ತಿನ ಯಾವುದೇ ಭಾಗದಲ್ಲಿ ಅಡಗಿದ್ದರೂ ಹಿಡಿದು, ಅವರ ಊಹೆಗೂ ಮೀರಿದ ಶಿಕ್ಷೆಯನ್ನು ಅವರಿಗೆ ವಿಧಿಸದೆ ಬಿಡುವುದಿಲ್ಲ ಎಂದು ಪ್ರಧಾನಿಯವರು ಗುಡುಗಿದ್ದಾರೆ. ಯುದ್ಧವನ್ನು ಯೋಜಿಸುತ್ತಲೇ, ಅವರು ನಮ್ಮ ಮೂಲಕ ಹರಿದು ಹೋಗುವ ನದಿಯ ನೀರನ್ನು ಅವರಿಗೆ ದೊರಕದ ಹಾಗೆ ಮಾಡಿ, ಅವರು ನೀರಿಲ್ಲದೆ ಪರಿತಪಿಸುವಂತೆ ಮಾಡುವುದು, ಅನಂತರ ಮುನ್ಸೂಚನೆಯಿಲ್ಲದೆ ಝೀಲಂ ನದಿಯಿಂದ ಅಪಾರ ಪ್ರಮಾಣದ ನೀರನ್ನು ಬಿಟ್ಟು ಪ್ರವಾಹವನ್ನು ಸೃಷ್ಟಿಸುವುದು ಮೊದಲಾದ ಕಠಿಣ ಕ್ರಮಗಳನ್ನೂ ಕೈಗೊಂಡಿದ್ದಾರೆ. ಮೇಲ್ನೋಟಕ್ಕೆ ಇವು ಅಮಾನವೀಯವೆಂದು ಕಂಡುಬಂದರೂ, ಅಮಾನವೀಯ ಗುಣಗಳನ್ನೇ ತಮ್ಮಲ್ಲಿ ಮೈಗೂಡಿಸಿಕೊಂಡವರಿಗೆ ಇದೇ ಸರಿಯಾದ ಭಾಷೆ. ಆದರೆ ಇವಾವುದೂ ಆತುರದಿಂದ ತೆಗೆದುಕೊಂಡ ಅವಿವೇಕದ ನಿರ್ಧಾರಗಳಲ್ಲ ಎಂಬುದನ್ನು ಗಮನಿಸಬೇಕು. ಇಷ್ಟಾದರೂ ಭಾರತವು ದುಡುಕದೆ ಸಂಯಮದಿಂದ ಯೋಚಿಸಿ, ಯುದ್ಧದ ಆಗುಹೋಗು ಮತ್ತು ಪರಿಣಾಮಗಳನ್ನು ಪರಿಗಣಿಸಿ ಕೊನೆಗೆ ನಿರ್ಧಾರವನ್ನು ತೆಗೆದಕೊಂಡು ಪ್ರತೀಕಾರದ ಕ್ರಮವನು ಕೈಗೊಂಡಿದೆ. ಆದರೆ ಈ ಹಂತದಲ್ಲಿ ಇದು ಭಯೋತ್ಪಾದನೆಗೆ ತೋರುತ್ತಿರುವ ಪ್ರತಿಕ್ರಿಯೆಯಾಗಿದೆಯೇ ಹೊರತು ಪಾಕಿಸ್ತಾನದ ಮೇಲೆ ಸಾರಿರುವ ಪೂರ್ಣಪ್ರಮಾಣದ ಯುದ್ಧವಲ್ಲ. ಅದನ್ನು ಸದ್ಯಕ್ಕೆ ಆ ಮಟ್ಟಕ್ಕೆ ಏರಿಸುವ ಯೋಚನೆಯೂ ಸರ್ಕಾರದ ಕ್ರಮದ ಹಿಂದೆ ಇರಲಿಲ್ಲ. ಕೇವಲ ಭಯೋತ್ಪಾದಕರಿಗೆ ತರಬೇತಿಯನ್ನು ನೀಡುವ ಸ್ಥಳಗಳನ್ನು, ಅವರ ಅಡಗುದಾಣಗಳನ್ನು ಹಾಗೂ ಅವರನ್ನು ಪ್ರೋತ್ಸಾಹಿಸುತ್ತಾ ಅವರ ಕೃತ್ಯಗಳಿಗೆ ಬೆಂಬಲವನ್ನು ಕೊಡುತ್ತಿರುವವರ ನಿವಾಸಗಳನ್ನು ಮಾತ್ರ ಗುರಿಯಾಗಿಸಿಕೊಂಡು ದಾಳಿಮಾಡಲಾರಂಭಿಸಿತು. ಹೀಗೆ ಮಾಡುವಾಗ ನಾಗರಿಕರಿಗಾಗಲೀ, ಆ ದೇಶದ ಮಿಲಿಟರಿ ನೆಲೆಗಳ ಮೇಲಾಗಲೀ, ಸರ್ಕಾರೀ ಕಟ್ಟಡಗಳ ಮೇಲಾಗಲೀ ದಾಳಿಮಾಡುವ ಉದ್ದೇಶವು ಭಾರತಕ್ಕೆ ಇರಲಿಲ್ಲ.

ಯುದ್ಧದಂತಹ ಕಠಿಣ ಕ್ರಮಗಳ ಕಾರ್ಮೋಡವು ಕವಿದಿರುವಾಗ ಒಂದು ನೆಮ್ಮದಿಯ ವಿಷಯವೆಂದರೆ, ಭಯೋತ್ಪಾದನೆಯ ನಿರ್ಮೂಲನೆಯ ನಿಟ್ಟಿನಲ್ಲಿ ಪ್ರಧಾನಿಯವರು ತೆಗೆದುಕೊಳ್ಳುವ ಎಲ್ಲ ಕ್ರಮಗಳಿಗೂ ತಮ್ಮ ಬೆಂಬಲವಿದೆಯೆಂದು ಎಲ್ಲ ವಿಪಕ್ಷಗಳು ಸಾರಿವೆ.

ಪ್ರಪಂಚದಲ್ಲಿ ಸ್ವಾರ್ಥಕ್ಕಾಗಿ ಭಯೋತ್ಪಾದನೆಯನ್ನು ಪೋಷಿಸಿಕೊಂಡು ಬರುತ್ತಿರುವ ದೇಶಗಳು ಕೆಲವು ಇವೆ.

ಅಂತಹವು ನಮ್ಮ ಕ್ರಮದ ಬಗೆಗೆ ಅತೃಪ್ತಿಯನ್ನು ವ್ಯಕ್ತಪಡಿಸಿವೆ.

▶▶ 4ನೇ ಪುಟಕ್ಕೆ...

## ಕದನ ವಿರಾಮ

ಭಾರತದ ಉದ್ದೇಶವನ್ನು ಅರ್ಥಮಾಡಿಕೊಳ್ಳುವುದನ್ನು ಮತ್ತು ತನ್ನ ನೆಲದಲ್ಲಿ ಸಾಕಲ್ಪಡುತ್ತಿರುವ ಭಯೋತ್ಪಾದನೆಯನ್ನು ಬೇರು ಸಹಿತ ಕಿತ್ತೆಸೆಯುವುದನ್ನು ಬಿಟ್ಟು ಗಡಿಯಾಚೆಯಿಂದ ಅಮಾಯಕ ನಾಗರಿಕರ ಮೇಲೆ ಗುಂಡಿನ ದಾಳಿಮಾಡಲು ಮತ್ತು ನಮ್ಮ ದೇಶದ ವಿವಿಧ ಸ್ಥಳಗಳನ್ನು ಗುರಿಯಾಗಿಟ್ಟು ಕೊಂಡು ದ್ರೋಣ್ ದಾಳಿಯನ್ನು ನಡೆಸಲು ಪಾಕಿಸ್ತಾನವು ಪ್ರಯತ್ನಿಸಿತು. ಇದರಿಂದ ಭಾರತವು ಅನಿವಾರ್ಯವಾಗಿ ಕಠಿಣಕ್ರಮಕ್ಕೆ ಮುಂದಾಗಿ, ಪಾಕಿಸ್ತಾನದ ಮಿಲಿಟರಿಯ ಒಂಬತ್ತು ವಾಯು ನೆಲೆಗಳನ್ನು ಸಂಪೂರ್ಣವಾಗಿ ನಾಶಪಡಿಸಿತು ಮತ್ತು ಕರಾಚಿ ಬಂದರಿಗೂ ಸಾಕಷ್ಟು ಹಾನಿಯನ್ನುಂಟು ಮಾಡಿತು. ಇದರಿಂದ ದಿಗಿಲುಗೊಂಡ ಪಾಕಿಸ್ತಾನವು ಅಮೆರಿಕದ ಬಳಿಗೆ ಹೋಗಿ ಭಾರತ–ಪಾಕಿಸ್ತಾನಗಳ ನಡುವೆ ಕದನ ವಿರಾಮವನ್ನು ಘೋಷಿಸಿ ಶಾಂತಿಯನ್ನು ಸ್ಥಾಪಿಸುವಂತೆ ಗೋಗರೆಯಿತು.

ಮೇ 10ನೆಯ ದಿನಾಂಕದಂದು, ಭಾರತವು ತನ್ನ ಪೂರ್ಣ ಅನುಮತಿಯನ್ನು ನೀಡುವ ಮೊದಲೇ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತ ಪಾಕಿಸ್ತಾನಗಳೆರಡೂ ತಮ್ಮ ನಡುವಿನ ಆತಂಕದ ವಾತಾವರಣವನ್ನು ತಿಳಿಗೊಳಿಸಿಕೊಳ್ಳಲು ಕದನವಿರಾಮಕ್ಕೆ ಒಪ್ಪಿಗೆಯನ್ನು ಸೂಚಿಸಿವೆ ಎಂದು ಘೋಷಿಸಿದರು. ಟ್ರಂಪ್ ಅವರ ಆತುರದ ಈ ಹೇಳಿಕೆಯು ವಿಶ್ವದಾದ್ಯಂತ ಸಂಚಲನವನ್ನು ಸೃಷ್ಟಿ ಮಾಡಿತು.

ಇದಕ್ಕೆ ಭಾರತವು ಬಹಳ ಎಚ್ಚರಿಕೆಯಿಂದ ತನ್ನ ಪ್ರತಿಕ್ರಿಯೆಯನ್ನು ನೀಡಿತು. ತಾನು ಶಾಂತಿಯನ್ನು ಸ್ಥಾಪಿಸುವುದರ ಪರವಾಗಿದ್ದರೂ ಮತ್ತು ಮಾತುಕತೆಗೆ ಸಿದ್ಧವಿದ್ದರೂ, ಅದಕ್ಕೂ ಮೊದಲು ಪಾಕಿಸ್ತಾನವು ತನ್ನ ನೆಲದಿಂದ ನಡೆಸುತ್ತಿರುವ ಭಯೋತ್ಪಾದನೆಯ ಕೃತ್ಯಗಳನ್ನು ನಿಲ್ಲಿಸಬೇಕು, ಭಯೋತ್ಪಾದಕರನ್ನು ಭಾರತಕ್ಕೆ ಒಪ್ಪಿಸಬೇಕು ಮತ್ತು ಪಾಕ್ ಆಕ್ರಮಿತ ಭಾರತದ ಪ್ರದೇಶವನ್ನು ತನಗೆ ಹಿಂದಿರುಗಿಸಬೇಕು ಎಂದು ಭಾರತವು ತನ್ನ ನಿಬಂಧನೆಯನ್ನು ಸೂಚಿಸಿದೆ. ಅಲ್ಲದೆ, ಟ್ರಂಪ್ ಅವರ ಪ್ರಯತ್ನವು ಸದುದ್ದೇಶದಿಂದ ಕೂಡಿದ್ದರೂ ಭಾರತ ಮತ್ತು ಪಾಕಿಸ್ತಾನದ ನಡುವೆ ಇರುವ ಪರಿಸ್ಥಿತಿಯು ಅಷ್ಟು ಸರಳವಾಗಿ ಬಗೆ ಹರಿಯುವಂತಹುದಲ್ಲ. ಭಾರತಕ್ಕೆ ತನ್ನ ಸಮಗ್ರತೆಯನ್ನು ರಕ್ಷಿಸಿಕೊಳ್ಳುವುದು ಪ್ರಥಮ ಆದ್ಯತೆಯಾಗಿದೆ. ಶಾಂತಿ ಸ್ಥಾಪನೆಯು ಪರಸ್ಪರರಲ್ಲಿರುವ ನಂಬಿಕೆ, ವಿಶ್ವಾಸಗಳನ್ನು ಅವಲಂಬಿಸಿರುತ್ತದೆ. ಆದರೆ ಪಾಕಿಸ್ತಾನವು ಇಲ್ಲಿಯವರೆಗೆ ಈ ನಂಬಿಕೆ, ವಿಶ್ವಾಸಗಳನ್ನು ಉಳಿಸಿಕೊಳ್ಳುವುದರ ಬದಲು ಅದರ ವಿರುದ್ಧ ದಿಕ್ಕಿನಲ್ಲಿಯೇ ನಡೆದುಕೊಂಡು ಬಂದಿದೆ. ಆದುದರಿಂದ ನಮ್ಮ ನಿಬಂಧನೆಗಳಿಗೆ ಒಪ್ಪಿದರೆ ಮಾತ್ರ ನಾವು ಕದನ ವಿರಾಮಕ್ಕೆ ಒಪ್ಪುತ್ತೇವೆ. ಇಲ್ಲದಿದ್ದರೆ, ಪಾಕಿಸ್ತಾನದ ಕಡೆಯಿಂದ ಒಂದು ಗುಂಡು ತೂರಿ ಬಂದರೂ, ಒಬ್ಬನೇ ಒಬ್ಬ ಭಯೋತ್ಪಾದಕ ನಮ್ಮ ದೇಶದಲ್ಲಿ ಕಾಲಿಟ್ಟರೂ ಅದನ್ನು ನಾವು ಆ ದೇಶದ ಯುದ್ಧದ ಉಪಕ್ರಮವೆಂದೇ ಭಾವಿಸಿ ಸೂಕ್ತ ಮಿಲಿಟರಿ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ತನ್ನ ಕಠಿಣ ಸಂದೇಶವನ್ನು ಇಡೀ ಜಗತ್ತಿಗೆ ಭಾರತವು ಸ್ಪಷ್ಟಪಡಿಸಿದೆ.

ಪತ್ರಿಕೆಯ ಬಳಗ

ಸಹಾಯಕ ಸಂಪಾದಕರು
**ಅಂಬಿಕಾ ಎಂ. ಹುಲಿನಾಯ್ಕರ್**

ಸಂಯೋಜಕ ಸಂಪಾದಕರು
**ಎಂ.ಎಸ್.ಪಾಟೀಲ್**

ಸಲಹಾ ಸಂಪಾದಕರು
**ಎನ್.ಭಾರತಿ**

ಸಂಪಾದಕ ಮಂಡಲಿ
**ಡಾ. ಭವಾನಿ ಸ್ಟಾಲಿನ್**
**ಡಾ. ಮನೋನ್ಮಣಿ ಎಂ.ಎಚ್**
**ಡಾ. ಲಾವಣ್ಯ ರಮಣ**

ಸಹಾಯಕ ಸಂಪಾದಕರು:
**ಎನ್. ಆನಂದ**

ಪುಟ ವಿನ್ಯಾಸ:
**ಸುಮಾ ಸಾಗರ್**

## ಡಾ.ಎನ್.ನಾರಾಯಣಪ್ಪ ಜಯಮ್ಮ ದಂಪತಿಗಳಿಂದ ಶ್ರೀದೇವಿ ಸಂಸ್ಥೆಯಲ್ಲಿ ದತ್ತಿ ಸ್ಥಾಪನೆ

# ಕುಮಾರಿ ಸುಧಾ ನಾರಾಯಣಪ್ಪ ಜಯಮ್ಮ ಫಿಸಿಯೊಥೆರಪಿ ಪ್ರತಿಭಾ ಪುರಸ್ಕಾರ

ವಿವಿಧ ಶಾರೀಕ ಬಾಧೆಗಳಿಗೆ ತುತ್ತಾದ ಅದೆಷ್ಟೋ ಜನರನ್ನು ತಮ್ಮ ಫಿಸಿಯೊಥೆರಪಿ ಚಿಕಿತ್ಸೆಯಿಂದ ಪುನಃಶ್ಚೇತನಗೊಳಿಸಿ ಬಾಳು ಬೆಳಗಿಸುವಂತಹ ಸೇವೆ ಸಲ್ಲಿಸಿದವರು ಡಾ.ಎನ್. ನಾರಾಯಣಪ್ಪ ಅವರು. ಸದ್ಯ ಬೆಂಗಳೂರಿನಲ್ಲಿ ನೆಲೆಸಿರುವ ಅವರು ಸಾಕಷ್ಟು ಜನರಿಗೆ ಯೋಗಾಭ್ಯಾಸ ಕಲಿಸಿದ ಗುರು ಎಂಬ ಗೌರವಕ್ಕೆ ಪಾತ್ರರಾಗಿದ್ದಾರೆ. ತಮ್ಮ 89ರ ವಸಂತದಲ್ಲಿರುವ ಅವರು ಅರವತ್ತರ ದಶಕದಲ್ಲಿ ರಾಜ್ಯದಲ್ಲಿ ಫಿಸಿಯೊಥೆರಪಿ ಕೋರ್ಸ್‌ನ ಆರಂಭಿಕ ವರ್ಷದ ವಿದ್ಯಾರ್ಥಿಯೂ ಹೌದು. ತುಮಕೂರಿನ ಜಿಲ್ಲಾ ಸಾರ್ವಜನಿಕ ಆಸ್ಪತ್ರೆಯಲ್ಲಿ ಫಿಜಿಯೋಥೆರಪಿಸ್ಟ್ ಆಗಿ ಅವರು ಸೇವೆ ಸಲ್ಲಿಸಿದ್ದಾರೆ. ಫಿಜಿಯೋಥೆರಪಿ ಬೋಧಕರು ಮತ್ತು ಸಂಘಟಕರಾಗಿ ಅವರದು ಅಮೂಲ್ಯ ಸೇವೆ.

ಇದೀಗ ಅವರು ರಾಜ್ಯದ ಪ್ರಮುಖ ಫಿಸಿಯೊಥೆರಪಿ ಕಾಲೇಜುಗಳಲ್ಲಿ ಒಂದು ಎಂದು ಹೆಸರಾಗಿರುವ ತುಮಕೂರಿನ ಶ್ರೀದೇವಿ ಶಿಕ್ಷಣ ಸಂಸ್ಥೆಯ ಫಿಸಿಯೊಥೆರಪಿ ಕಾಲೇಜಿಗೆ ಹತ್ತು ಲಕ್ಷ ರೂಪಾಯಿಗಳ ದತ್ತಿಯನ್ನು ನೀಡಿದ್ದಾರೆ. ಕಾಲೇಜಿನ ಪ್ರತಿಭಾವಂತ ಫಿಸಿಯೊಥೆರಪಿ ವಿದ್ಯಾರ್ಥಿಗಳನ್ನು ಹಾಗೂ ಸಂಸ್ಥೆಯಲ್ಲಿ ಶಿಕ್ಷಣ ಪಡೆದು ಫಿಜಿಯೋಥೆರಪಿ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡಿರುವವರನ್ನು ಮಾಡುವವರನ್ನು, ಪುರಸ್ಕರಿಸುವ ಉದಾತ್ತ ಉದ್ದೇಶದಿಂದ ಕುಮಾರಿ ಸುಧಾ ನಾರಾಯಣಪ್ಪ ಜಯಮ್ಮ ದತ್ತಿಯನ್ನು ಸ್ಥಾಪನೆ ಮಾಡಿದ್ದಾರೆ.

ಡಾ.ಎನ್.ನಾರಾಯಣಪ್ಪ ಅವರ ಮಗಳು ಕುಮಾರಿ ಸುಧಾ ಹುಟ್ಟಿನಿಂದಲೇ ಆರೋಗ್ಯದ ಸಮಸ್ಯೆಯಿಂದ ಬಾಧಿತರಾಗಿದ್ದರು. ಆದರೂ ತಮ್ಮ ಅನಾರೋಗ್ಯದ ಸವಾಲನ್ನು ಹಿಮ್ಮೆಟ್ಟಿಸಿದ್ದ ಕುಮಾರಿ ಸುಧಾ ಬಿ.ಎಸ್ಸಿ., ಎಂಬಿಎ, ಎಂಸಿಎಗಳಲ್ಲಿ ಪದವಿ ಗಳಿಸಿದ್ದರು. ತಮ್ಮ ಮನೆಯಲ್ಲೇ ಮಕ್ಕಳಿಗೆ ಗಣಿತ, ವಿಜ್ಞಾನ ಮತ್ತು ಇಂಗ್ಲಿಷ್ ಕಲಿಸುವ ಮೂಲಕ ಅನೇಕ ವಿದ್ಯಾರ್ಥಿಗಳ ಭವಿಷ್ಯದ ಬಾಳನ್ನು ಅವರು ಬೆಳಗಿದ್ದರು. ಅಲ್ಲದೆ, ರೋಗಬಾಧಿತರಿಗೆ ಫಿಸಿಯೊಥೆರಪಿ ಚಿಕಿತ್ಸೆ ನೀಡುವುದರಲ್ಲಿ ತಮ್ಮ ತಂದೆಗೂ ಅವರು ಸಾಕಷ್ಟು ನೆರವು ನೀಡುತ್ತಿದ್ದರು.




ಹೀಗೆ, ಹಲವಾರು ವಿಷಯಗಳಲ್ಲಿ 48ವರ್ಷಗಳ ಸಾರ್ಥಕ ಬದುಕಿನಲ್ಲಿ ತಮ್ಮ ಮಗಳೇ ತಮಗೆ ಸ್ಫೂರ್ತಿಯಾಗಿದ್ದಳು ಎನ್ನುವ ಡಾ.ನಾರಾಯಣಪ್ಪ ಅವರು ಈ ದತ್ತಿನಿಧಿ ಸ್ಥಾಪಿಸಲು ಮುಖ್ಯ ಪ್ರೇರಣೆ ನನ್ನ ಮಗಳೇ ಆಗಿದ್ದಾಳೆ ಎನ್ನುತ್ತಾರೆ.

ಕಳೆದ (2025) ಮೇ 13ರಂದು ಕಾಲೇಜಿನ ಫಿಸಿಯೊಥೆರಪಿ ಹೊಸ ಬ್ಯಾಚ್‌ನ ಆರಂಭದ ಸಂದರ್ಭದಲ್ಲಿ 'ಕುಮಾರಿ ಸುಧಾ ನಾರಾಯಣಪ್ಪ ಜಯಮ್ಮ ದತ್ತಿ ನಿಧಿ' ಸ್ಥಾಪನೆಯ ಎರಡನೆಯ ವರ್ಷದ ಸಮಾರಂಭ ವಿದ್ಯುಕ್ತವಾಗಿ ನಡೆಯಿತು.

ಅದರಂತೆ, ಕಾಲೇಜಿನಲ್ಲಿ 1997–98ನೇ ಬ್ಯಾಚ್‌ನಲ್ಲಿ ಶ್ರೀದೇವಿ ಫಿಜಿಯೋಥೆರಪಿ ಕಾಲೇಜಿ ವಿದ್ಯಾರ್ಥಿಯಾಗಿದ್ದ, ಪ್ರಸ್ತುತ ತಿರುವನಂತಪುರ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ನರಶಸ್ತ್ರಚಿಕಿತ್ಸಾ ವಿಭಾಗದ ಮುಖ್ಯ ಫಿಸಿಯೊಥೆರಪಿಸ್ಟ್ ಆಗಿರುವ ಡಾ.ಬಿನು ಜೇಮ್ಸ್ ಈ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿದ್ದು ವಿಶೇಷವಾಗಿ ಗಮನ ಸೆಳೆಯಿತು. ಈ ಕಾರ್ಯಕ್ರಮದ ಎಲ್ಲಾ ಜವಾಬ್ದಾರಿಯನ್ನು ಡಾ. ಆನಂದಿಯವರು ಸುಸೂತ್ರವಾಗಿ ನಿರ್ವಹಿಸಿದರು.

"ಕೆಲವಾರು ವರ್ಷಗಳ ಹಿಂದೆ ಫಿಸಿಯೊಥೆರಪಿಸ್ಟ್‌ಗಳನ್ನು ಕೇವಲ ಮೂಳೆತಜ್ಞರ ಅಟೆಂಡರ್‌ಗಳೆಂದು ಭಾವಿಸಲಾಗುತ್ತಿತ್ತು. ಆದರೆ, ಇಂದು ಪರಿಸ್ಥಿತಿ ಬದಲಾಗಿದ್ದು, ಫಿಸಿಯೊಥೆರಪಿಸ್ಟ್‌ಗಳು ಸಮಗ್ರ ಚಿಕಿತ್ಸೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ.

ಈಗ ಫಿಸಿಯೊಥೆರಪಿಸ್ಟ್‌ಗಳು ಶೈಕ್ಷಣಿಕ ತಜ್ಞರಾಗಿ, ಕ್ಲಿನಿಷಿಯನ್‌ರಗಳಾಗಿ, ಸಂಶೋಧಕರಾಗಿ ಹಾಗೂ ಉದ್ಯಮಶೀಲರಾಗಿಯೂ ಗಮನ ಸೆಳೆಯುತ್ತಿದ್ದಾರೆ" ಎಂದು ಡಾ. ಬಿನು ಜೇಮ್ ಅವರು ವಿವರಿಸಿದರು.

"ಇತ್ತೀಚಿನ ವರ್ಷಗಳಲ್ಲಿ ಚಿಕಿತ್ಸೆಗೆ ಪೂರಕವಾದ ಫಿಸಿಯೊಥೆರಪಿ ಮತ್ತಿತರ ಆರೋಗ್ಯ ಶುಶ್ರೂಷೆಗಳಿಗೆ (ಅಲೈಡ್ ಹೆಲ್ತ್‌ಕೇರ್) ಹೆಚ್ಚಿನ ಆದ್ಯತೆ ಕಂಡು ಬರುತ್ತಿದೆ. ಸರ್ಕಾರಗಳು ಕೂಡ ಇಂತಹ ಸೇವೆಗಳ ಪ್ರಾಮುಖ್ಯವನ್ನು ಮನಗಂಡು ಹೆಚ್ಚಿನ ಒತ್ತು ನೀಡುತ್ತಿವೆ" ಎಂದವರು, ತಾವು ಇದೇ ಕಾಲೇಜಿನಲ್ಲಿ ಓದುತ್ತಿದ್ದಾಗ ಇದ್ದ ಪರಿಸ್ಥಿತಿಗೆ ಹಲವು ಉದಾಹರಣೆಗಳನ್ನು ನೀಡುವ ಮೂಲಕ ಈಗ ಅಗಾಧ ಬೆಳವಣಿಗೆಯಾಗಿದೆ ಎಂಬುದನ್ನು ಸಭಿಕರಿಗೆ ಮನವರಿಕೆ ಮಾಡಿಕೊಟ್ಟರು.

ವಿಶೇಷ ಅತಿಥಿಯಾಗಿ ಪಾಲ್ಗೊಂಡಿದ್ದ ಬೆಂಗಳೂರು ದಯಾನಂದ ಫಿಸಿಯೊಥೆರಪಿ ಕಾಲೇಜಿನ ಪ್ರೊಫೆಸರ್ ಡಾ.ಶ್ರೀಹರಿಶರ್ಮಾ ಕೆ.ಎನ್. ಅವರ ಪ್ರಕಾರ, "ಸಮಗ್ರ ವೈದ್ಯಕೀಯ ಚಿಕಿತ್ಸೆಯಲ್ಲಿ ಫಿಸಿಯೊಥೆರಪಿಸ್ಟ್‌ಗಳ ಮಹತ್ವ ಹೆಚ್ಚಾಗುತ್ತಿದ್ದು, ಅದೇ ರೀತಿ ಈ ವೃತ್ತಿಪರರಿಗೆ ಬೇಡಿಕೆಯೂ ಬೆಳೆಯುತ್ತಿದೆ. "ಸುಮಾರು 20–25 ವರ್ಷಗಳ ಹಿಂದೆ ಫಿಸಿಯೊಥೆರಪಿಸ್ಟ್‌ಗಳು ಹೆಚ್ಚೆಂದರೆ ಡಿಪ್ಲೊಮಾ ವ್ಯಾಸಂಗ ಮಾಡುತ್ತಿದ್ದರು. ಆದರೆ, ಇಂದು ಫಿಸಿಯೊಥೆರಪಿಯಲ್ಲಿ ಪಿಎಚ್.ಡಿ. ಮಾಡುವುದಕ್ಕೂ ಅವಕಾಶಗಳು ಸೃಷ್ಟಿಯಾಗಿವೆ. ಅಷ್ಟರಮಟ್ಟಿಗೆ ಈ ವೃತ್ತಿಪರರಿಗೆ ಬೇಡಿಕೆ ಹೆಚ್ಚಾಗಿದೆ.

"ಶ್ರೀದೇವಿ ಸಂಸ್ಥೆಯು ಫಿಸಿಯೊಥೆರಪಿ ಕೋರ್ಸ್‌ಗೆ ಅತ್ಯುತ್ತಮ ಮೂಲಸೌಕರ್ಯ ವ್ಯವಸ್ಥೆ ಹೊಂದಿದೆ. ಜೊತೆಗೆ, ಸಂಸ್ಥೆಯು ಆಸ್ಪತ್ರೆಯ ಸೌಲಭ್ಯವನ್ನೂ ಹೊಂದಿರುವುದು ವಿದ್ಯಾರ್ಥಿಗಳಿಗೆ ಹೆಚ್ಚಿನ ಅವಕಾಶ ಕಲ್ಪಿಸುತ್ತದೆ. ಫಿಸಿಯೊಥೆರಪಿ ವಿದ್ಯಾರ್ಥಿಗಳು ಇದನ್ನು ಬಳಸಿಕೊಂಡು ವೃತ್ತಿನೈಪುಣ್ಯವನ್ನು ಕರಗತ ಮಾಡಿಕೊಳ್ಳಬೇಕು" ಎಂಬ ಕಿವಿಮಾತನ್ನೂ ಡಾ.ಶರ್ಮಾ ವಿದ್ಯಾರ್ಥಿಗಳಿಗೆ ನುಡಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಡಾ.ಎನ್.ನಾರಾಯಣಪ್ಪ ಅವರು, ಮಗಳು ಸುಧಾ ತಮ್ಮ ವೃತ್ತಿಗೆ ನೆರವಾಗುತ್ತಿದ್ದುದನ್ನು ನೆನೆದರು. ತಮ್ಮ ಮಗಳ ಕ್ರಿಯಾಶೀಲತೆ ಹಾಗೂ ಸ್ಫೂರ್ತಿದಾಯಕ ವ್ಯಕ್ತಿತ್ವವನ್ನು ದೃಷ್ಟಿಯಲ್ಲಿರಿಸಿಕೊಂಡು ಫಿಸಿಯೊಥೆರಪಿಸ್ಟ್‌ಗಳನ್ನು ಪುರಸ್ಕರಿಸುವ ಸಲುವಾಗಿ ಈ ದತ್ತಿನಿಧಿ ಸ್ಥಾಪಿಸಿರುವುದಾಗಿ ಅವರು ವಿವರಿಸಿದರು.

ಶ್ರೀದೇವಿ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿ "ನರಶಸ್ತ್ರಚಿಕಿತ್ಸೆ, ಮೂಳೆಸರ್ಜರಿ ಇನ್ನಿತರ ಪ್ರಮುಖ ಚಿಕಿತ್ಸೆಗಳ ನಂತರದ ಪುನಃಶ್ಚೇತನದಲ್ಲಿ ಫಿಸಿಯೊಥೆರಪಿಸ್ಟ್‌ಗಳ ಪಾತ್ರ ಬಹಳ ಮುಖ್ಯವಾಗುತ್ತಿದೆ. ಇಂತಹ ಸಂದರ್ಭದಲ್ಲಿ ಫಿಸಿಯೊಥೆರಪಿಸ್ಟ್‌ಗಳು ಕೇವಲ ಯಾಂತ್ರಿಕವಾಗಿರದೆ ಬಾಧಿತರ ಭಾವನೆ ಹಾಗೂ ಸನ್ನಿವೇಶ ಅರ್ಥಮಾಡಿಕೊಂಡು ಸ್ಪಂದಿಸಿದರೆ ಹೆಚ್ಚಿನ ಯಶಸ್ಸು ಸಾಧಿಸಬಹುದು" ಎನ್ನುತ್ತಾ ತಮ್ಮ ಅನುಭವವನ್ನು ಹಂಚಿಕೊಂಡರು.

**ಪ್ರಶಸ್ತಿ ಪುರಸ್ಕೃತರು:**

ಇದೇ ವೇಳೆ, ಫಿಸಿಯೊಥೆರಪಿ ಕ್ಷೇತ್ರದಲ್ಲಿ ಅಮೋಘ ಸಾಧನೆ ಮಾಡಿರುವ ಡಾ.ಬಿನುಜೇಮ್ ಅವರಿಗೆ ಮತ್ತು ವಿದ್ಯಾರ್ಥಿನಿಯರಾದ ಕುಮಾರಿ ಸಮಿಕ್ಷ್ಯಾಥಾಪಾ ಹಾಗೂ ಕುಮಾರಿ ಚಂದನಾ ಎನ್.ಎನ್. ಅವರಿಗೆ ಪ್ರಸಕ್ತ ಸಾಲಿನ 'ಕುಮಾರಿ ಸುಧಾ ನಾರಾಯಣಪ್ಪ ಜಯಮ್ಮ' ಪ್ರಶಸ್ತಿ ನೀಡಿ ಪುರಸ್ಕರಿಸಲಾಯಿತು.

ಶ್ರೀದೇವಿ ಕಾಲೇಜಿನಲ್ಲಿ ವ್ಯಾಸಂಗ ಮಾಡಿ 19 ವರ್ಷಗಳಿಂದ ವೃತ್ತಿಜೀವನದಲ್ಲಿರುವ ಡಾ.ಬಿನು ಜೇಮ್ ಅವರು ತಮ್ಮ ಅತ್ಯಾಧುನಿಕ ಫಿಸಿಯೊಥೆರಪಿ ಪದ್ಧತಿಯಿಂದಾಗಿ ಸಾವಿರಾರು ಜನರ ಬದುಕಿನ ಗುಣಮಟ್ಟ ಉನ್ನತ ಗೊಳ್ಳಲು ಕಾರಣರಾಗಿದ್ದಾರೆ. ಜಿನೀವಾದಲ್ಲಿ ಪ್ರಧಾನ ಕಚೇರಿ ಹೊಂದಿರುವ ಇಂಟರ್ ನ್ಯಾಷನಲ್ ಹ್ಯೂಮನ್ ರೈಟ್ಸ್‌ನ ಕೇರಳ ವಿಭಾಗದ ಪ್ರಧಾನ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಫಿಸಿಯೋಥೆರಪಿಯ ಮೇಲೆ ಎರಡು ಪುಸ್ತಕಗಳನ್ನು ಬರೆದಿರುವ ಅವರು, ನ್ಯೂರಾಲಾಜಿಕಲ್ ಸೊಸೈಟಿ ಆಫ್ ಇಂಡಿಯಾದ ಕೇರಳಶಾಖೆಯ ಸದಸ್ಯತ್ವ ಪಡೆದ ಮೊತ್ತಮೊದಲ ಫಿಸಿಯೊಥೆರಪಿಸ್ಟ್ ಎಂಬ ಶ್ರೇಯಕ್ಕೆ ಪಾತ್ರರಾಗಿದ್ದಾರೆ.

ಸಮಿಕ್ಷ್ಯಾ ಥಾಪಾ 2021–22ನೇ ಬ್ಯಾಚ್‌ನ ಫಿಸಿಯೊಥೆರಪಿ ಇಂಟರ್ನಿಯಾಗಿದ್ದು, ವೃತ್ತಿಯ ಮೇಲೆ ಹಿಡಿತ ಸಾಧಿಸಲು ಹೊಂದಿರುವ ಶ್ರದ್ಧೆ ಹಾಗೂ ಹಾಕುವ ಪರಿಶ್ರಮದಿಂದ ಗಮನ ಸೆಳೆದಿದ್ದಾರೆ.

ಚಂದನಾಎನ್.ಎನ್. ಅವರು ಕೂಡ 2021–22ನೇ ಬ್ಯಾಚ್‌ನ ಪದವಿ ವಿದ್ಯಾರ್ಥಿನಿಯಾಗಿದ್ದು, ಕಲಿಕೆಯಲ್ಲಿ ಶಿಸ್ತು ಅನುಸರಿಸುವ ಜೊತೆಗೆ ಕಾಲೇಜಿನ ಎಲ್ಲ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಾರೆ. ನಾಲ್ಕು ವರ್ಷಗಳಿಂದ ಎಸ್‌ಸಿಟಿ ಮಹಿಳಾ ಥ್ರೋ ಬಾಲ್ ತಂಡದ ಕ್ಯಾಪ್ಟನ್ ಆಗಿ ಕಾಲೇಜು ಕ್ರೀಡಾಸಮಿತಿಯ ಸದಸ್ಯೆಯೂ ಆಗಿದ್ದಾರೆ.




■ ವರದಿ: ಎನ್. ಆನಂದ

---

# ಸಾವಿನಲ್ಲಿಯೂ ಸಾರ್ಥಕತೆ ಮೆರೆದ ಹಿರಿಯ ಪರ್ತಕರ್ತ ಅಂಕಣಕಾರ ಆರ್.ಕೆ.ಗೌಡ

ಇತ್ತೀಚಿನ ದಿನಗಳಲ್ಲಿ ದೇಹದಾನ ಬಗ್ಗೆ ಜಾಗೃತಿ ಹೆಚ್ಚಾಗುತ್ತಿರುವುದು ಒಂದು ಆಶಾದಾಯಕ ಬೆಳವಣಿಗೆಯಾಗಿದೆ. ದೇಹದಾನವೆಂಬುದು ಒಂದು ಪವಿತ್ರವಾದ ದಾನವಾಗಿದೆ, ಮನುಷ್ಯನ ಜೀವಿತಾವಧಿಯಲ್ಲಿ ಮಾಡುವ ಕೊನೆಯ ದಾನ. ತಮ್ಮ ಮರಣಾನಂತರ ದೇಹವನ್ನು ನೆಲದಲ್ಲಿ ಹೂಳುವ ಅಥವಾ ಸುಡುವ ಕೃತ್ಯದ ಬದಲಾಗಿ ಮಾನವ ತನ್ನ ಜೀವಿತಾವಧಿ ಉದ್ದಕ್ಕೂ ಪರೋಪಕಾರಿಯಾಗಿ ಬಾಳಿ ಹುಟ್ಟಿದ ಸಾರ್ಥಕತೆಯನ್ನು ಪರಿಪೂರ್ಣ ಮಾಡಲು ಮತ್ತೊಂದು ಸರಿಸಾಟಿಯಾಗದ ಸೇವೆಯೇ ದೇಹದಾನವಾಗಿದೆ. ಇವರ ಪ್ರಯತ್ನಕ್ಕೆ



ಕುಟುಂಬದ ಸದಸ್ಯರು ಸಾಥ್ ಕೊಟ್ಟು, ಎಲ್ಲಾ ಪ್ರಕ್ರಿಯೆಗಳನ್ನು ಮುಗಿಸಿ ಕೆಲವೇ ಗಂಟೆಯಲ್ಲಿಯೇ ತುಮಕೂರಿಗೆ ದೇಹವನ್ನು ಸಾಗಿಸಿ ಸಾವಿನ ನಂತರವೂ ಮನುಷ್ಯ ಉಪಯೋಗಕ್ಕೆ ಬರುವಂತಹ ಶಾಶ್ವತವಾದ ಕೆಲಸ ಮಾಡಬಹುದು ಎಂಬುದಕ್ಕೆ ಆರ್.ಕೆ.ಗೌಡರವರು ಮಾದರಿಯಾಗಿದ್ದಾರೆ ಎಂದು ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ಅಂಗ ರಚನಶಾಸ್ತ್ರ ವಿಭಾಗದ ಮುಖ್ಯಸ್ಥೆಯಾದ ಡಾ.ಸಿ.ಶಿವಲೀಲಾ ಅವರು ತಿಳಿಸಿದರು.

ಮಧುಗಿರಿಯ ಆರ್.ಕೆ. ಗೌಡರವರು ಬಹುಮುಖ ಪ್ರತಿಭೆ, ಹಿರಿಯ ಪರ್ತಕರ್ತರು, ಅತ್ಯುತ್ತಮ ಫೋಟೋಗ್ರಾಫರ್, ಮಧುಗಿರಿಯ ಏಕೇಶ್ ಪತ್ರಿಕೆಯ ವರದಿಗಾರರು, ಪತ್ರಿಕಾರಂಗದಲ್ಲಿ ಅಂಕಣಕಾರರಾಗಿ ಗುರುತಿಸಿಕೊಂಡಿದ್ದ ಆರ್.ಕೆ.ಗೌಡ (73) ಶನಿವಾರ ರಾತ್ರಿ ಮನೆಯಲ್ಲಿಯೇ ಅನಾರೋಗ್ಯ ಕಾರಣದಿಂದ ನಿಧನರಾದರು. ಭಾನುವಾರ ಅವರ ಕೊನೆಯ ಆಸೆಯಂತೆ ದೇಹವನ್ನು ತುಮಕೂರಿನ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಗೆ ದೇಹದಾನವಾಗಿ ನೀಡಲಾಗಿದೆ. ಕುಟುಂಬಸ್ಥರಾದ ಪತ್ನಿ ಶ್ರೀಮತಿ ಪದ್ಮಾವತಿ ಇಬ್ಬರು ಪುತ್ರಿಯರಾದ ಕೃಪಾಗೌಡ ಆರ್.ಕೆ ಮತ್ತು ಡಾ.ಶಿಲ್ಪ ಎಂ ಒಡೆಯರ್ ಇದ್ದಾರೆ.

ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ನಿರ್ದೇಶಕರಾದ ಡಾ.ರಮಣ್ ಎಂ. ಹುಲಿನಾಯ್ಕರ್ ಅವರು "ಒಂದು ಮೃತ ದೇಹ ಒಂದು ವರ್ಷಗಳ ಕಾಲ" ಸುಮಾರು 25 ವೈದ್ಯ ವಿದ್ಯಾರ್ಥಿಗಳಿಗೆ ಜ್ಞಾನಾರ್ಜನೆ ಮಾಡಲು ಮತ್ತು ವೃತ್ತಿಯಲ್ಲಿ ಪರಿಣಿತಿ ಸಾಧಿಸಲು ನೆರವಾಗುತ್ತದೆ' ಎಂದಿದ್ದಾರೆ.

# ಭಯೋತ್ಪಾದಕರ ಅಮಾನುಷ ಕೃತ್ಯ ಖಂಡನೀಯ

2ನೇ ಪುಟದಿಂದ

ಆದರೆ, ಬಹಳಷ್ಟು ದೇಶಗಳು ಪೆಹಲ್ಗಾಮ್‌ನಲ್ಲಿ ನಡೆದ ದಾಳಿಯ ಬಗೆಗೆ ಕೋಪವನ್ನೂ, ಸಂತ್ರಸ್ತರ ಬಗೆಗೆ ಸಂತಾಪವನ್ನು ವ್ಯಕ್ತಪಡಿಸಿವೆ.

ಅಮೇರಿಕಾ, ಇಸ್ರೇಲ್, ಬ್ರಿಟನ್, ಜಪಾನ್, ಅರಬ್‌ಎಮಿರೈಟ್ಸ್, ಫ್ರಾನ್ಸ್, ಸೌದಿ ಅರೇಬಿಯಾ ಮೊದಲಾದ ದೇಶಗಳು ತಮ್ಮ ಬೆಂಬಲವನ್ನು ಭಾರತಕ್ಕೆ ಘೋಷಿಸಿವೆ.

ಕೆಲವರು ಯುದ್ಧವೊಂದೇ ಸಮಸ್ಯೆಗಳಿಗೆ ಪರಿಹಾರದ ಮಾರ್ಗವಲ್ಲವೆಂದು ಹೇಳುತ್ತಿದ್ದಾರೆ. ಇಂದಿನ ಪರಿಸ್ಥಿತಿಯಲ್ಲಿ ಪಾಕಿಸ್ತಾನವನ್ನು ಹೊರತುಪಡಿಸಿ ಇತರ ದೇಶಗಳ ವಿಷಯದಲ್ಲಿ ಅದು ನಿಜವೂ ಹೌದು. ಭಾರತೀಯರು ಆಕ್ರಮಣಶೀಲರಲ್ಲ. ಆದರೆ, ಶ್ರೀಕೃಷ್ಣ ಪರಮಾತ್ಮನು ಭಗವದ್ಗೀತೆಯಲ್ಲಿ ಹೇಳಿರುವ ಹಾಗೆ ಇತರ ಮಾರ್ಗಗಳಿಂದ 'ಧರ್ಮರಾಜ್ಯ'ದ ಸ್ಥಾಪನೆ ಸಾಧ್ಯವಾಗದಿದ್ದರೆ, ನಾವು ಯುದ್ಧದ ಮಾರ್ಗವನ್ನು ಅನುಸರಿಸಿದರೆ ತಪ್ಪೇನೂ ಇರುವುದಿಲ್ಲ. ಇದು ಇಂದಿನ ಭಾರತದ ಜನಸಾಮಾನ್ಯರ ದೃಷ್ಟಿಯೂ ಹೌದು. ಪೆಹಲ್ಗಾಮ್ ಘಟನೆಯಿಂದ ಭಾರತೀಯ ಸಮಾಜದ ರಕ್ತ ಕುದಿಯುತ್ತಿದೆ ಮತ್ತು ಭಯೋತ್ಪಾದನೆಯನ್ನು ಸಂಪೂರ್ಣವಾಗಿ ನಿರ್ನಾಮ ಮಾಡಬೇಕು ಮತ್ತು ಅದನ್ನು ಪೋಷಿಸಿ ಬೆಳಸುವವರನ್ನೂ ನಾಶಮಾಡಬೇಕೆಂಬುದು ಅವರ



ಒತ್ತಾಯವಾಗಿದೆ. ಎಲ್ಲರಿಗೂ ತಿಳಿದಿರುವಂತೆ, ಪಾಕಿಸ್ತಾನದ ಸೇನಾ ಮುಖ್ಯಸ್ಥ ಪೆಹಲ್ಗಾಮಿನ ದಾಳಿಕೋರರನ್ನು ಕೆರಳಿಸಿ ಅವರ ಮನಸ್ಸಿನಲ್ಲಿ ಇಸ್ಲಾಂ ಮತದ ಶ್ರೇಷ್ಠತೆಯನ್ನು ಸಾರಲು ಕಾರ್ಯೋನ್ಮುಖರಾಗುವಂತಹ ಭಾಷಣವನ್ನು ಇತ್ತೀಚೆಗೆ ಮಾಡಿದ್ದರು. ಈ ಎಲ್ಲಾ ಕಾರಣದಿಂದ ಭಾರತವು, ಪಾಕಿಸ್ತಾನದ ಮೇಲೆ ತೆಗೆದುಕೊಂಡಿರುವ ಎಲ್ಲ ಕ್ರಮಗಳೂ ಸಮರ್ಥನೀಯವೇ ಆಗಿರುತ್ತದೆ. ಇದನ್ನು ಎಲ್ಲರೂ – ಭಾರತದ ಒಳಗಿನ ಮತ್ತು ಹೊರಗಿನ ಎಲ್ಲರೂ – ಅರ್ಥಮಾಡಿಕೊಳ್ಳಬೇಕು.

ಈಗ ಎದುರಾಗಿರುವ ಪರಿಸ್ಥಿತಿಯಲ್ಲಿ ಜನಸಾಮಾನ್ಯರಾದ ನಾವೆಲ್ಲರೂ ಸರ್ಕಾರದ ಕ್ರಮಗಳಿಗೆ ಹೆಗಲಿಗೆ ಹೆಗಲು ಕೊಟ್ಟು ಸಹಕರಿಸಬೇಕು. ಹಲವು ಕಾರ್ಪೊರೇಟ್ ಸಂಸ್ಥೆಗಳು ಮತ್ತು ಅಸ್ಸಾಂ ಸರ್ಕಾರ ಸಂತ್ರಸ್ತರ ಕುಟುಂಬದವರಿಗೆ ಉದಾರವಾಗಿ ಸಹಾಯ ಮಾಡಲು ಮುಂದೆ ಬಂದಿವೆ. ಇನ್ನಿತರ ಸಂಸ್ಥೆಗಳು, ಹಾಗೂ ಸಾರ್ವಜನಿಕರು, ಮತ್ತು ರಾಜ್ಯ ಸರ್ಕಾರಗಳು ಕೇಂದ್ರ ಸರ್ಕಾರಕ್ಕೆ ಎಲ್ಲ ಬಗೆಯ ಸಹಕಾರಗಳನ್ನೂ ನೀಡಬೇಕು ಎಂದು ನಾನು ಈ ಮೂಲಕ ವಿನಂತಿಸಿಕೊಳ್ಳುತ್ತೇನೆ.



# ಅರೆ ವೈದ್ಯಕೀಯ ಕೋರ್ಸ್‌ಗಳೇ ಆರೋಗ್ಯ ವಿ.ವಿ. ಬೆನ್ನೆಲುಬು

ಅರೆ ವೈದ್ಯಕೀಯ ವ್ಯಾಪ್ತಿಯ ಅಡಿ ಬರುವ ಕೋರ್ಸುಗಳಿಗೆ ಜಗತ್ತಿನಾದ್ಯಂತ ಹೆಚ್ಚಿನ ಬೇಡಿಕೆಯಿದ್ದು ಇದೇ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಬೆನ್ನೆಲುಬು, ದೈತ್ಯಶಕ್ತಿ ಎಂದು ರಾಜ್ಯ ಆರೋಗ್ಯ ಶುಶ್ರೂಷಾ ಮತ್ತು ಚಿಕಿತ್ಸಾ ಮಂಡಳಿ ಅಧ್ಯಕ್ಷ ಡಾ. ಯು.ಟಿ. ಇಫ್ತಿಕಾರ್ ಹೇಳಿದ್ದಾರೆ.



ಶ್ರೀದೇವಿ ಪ್ಯಾರಾಮೆಡಿಕಲ್ ಕಾಲೇಜು ವತಿಯಿಂದ ಕಳೆದ ಏಪ್ರಿಲ್ 11 ರಂದು ನಡೆದ ಪದವಿ ಪ್ರಧಾನ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಾ ಅವರು "ಇಂತಹ ಕೋರ್ಸ್ ಮಾಡಿದ ವಿದ್ಯಾರ್ಥಿಗಳಿಗೆ ಜಾಗತಿಕ ಮಟ್ಟದಲ್ಲಿ ವಿಫುಲ ಉದ್ಯೋಗಾವಕಾಶ ಲಭ್ಯವಿದೆ. ಪ್ರತಿ ವರ್ಷ ರಾಜ್ಯಾದ್ಯಂತ 60 ಸಾವಿರ ವಿದ್ಯಾರ್ಥಿಗಳು ಪ್ರವೇಶ ಪಡೆಯುತ್ತಿದ್ದಾರೆ. ಅರೋಗ್ಯ ವಿಶ್ವವಿದ್ಯಾಲಯವು ಪ್ರೇರಕಶಕ್ತಿಯಾಗಿದೆ. ಭವಿಷ್ಯವನ್ನು ರೂಪಿಸಲು ಕಾರಣವಾದ ಶಿಕ್ಷಣ ಸಂಸ್ಥೆಗಳಿಗೆ, ತಂದೆ–ತಾಯಿಗಳಿಗೆ ಕೊಡಬೇಕಾದಷ್ಟು ಗೌರವವನ್ನು ವಿದ್ಯಾರ್ಥಿಗಳು ನೀಡಬೇಕು. ವಿದ್ಯಾಭ್ಯಾಸ ಮಾಡಿದ ಶಿಕ್ಷಣ ಸಂಸ್ಥೆಗಳ ಬಗ್ಗೆ ನಿಕಟ ಸಂಪರ್ಕವನ್ನು ಇಟ್ಟುಕೊಳ್ಳಬೇಕು. ಪದವಿ ಮುಗಿಸಿ ಹೊರಬರುತ್ತಿರುವ ವಿದ್ಯಾರ್ಥಿಗಳು ಶ್ರೀದೇವಿ ಕಾಲೇಜಿನ ಭವಿಷ್ಯದ ಬ್ರಾಂಡ್ ಅಂಬಾಸಿಡರ್ ಆಗಿ ಕಾಲೇಜಿನ ಸರ್ವತೋಮುಖ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆಗಳನ್ನು ನೀಡಬೇಕು" ಎಂದು ಹಿತವಚನ ಬೋಧಿಸಿದರು.

ಬೆಂಗಳೂರಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯ ಡಾ. ಜಿ. ಮಂಜುನಾಥ್ ಗೌಡ ಮಾತನಾಡುತ್ತಾ "ಪದವಿ ಮುಗಿಸಿ ಹೊರಹೋಗುತ್ತಿರುವ ವಿದ್ಯಾರ್ಥಿಗಳು ಇಲ್ಲಿನ ಅಧ್ಯಾಪಕರು ಮತ್ತು ಕಾಲೇಜು ಆಡಳಿತ ಮಂಡಳಿ ನೀಡಿದ ನೆರವು, ಸಹಾಯ ಮರೆಯಬಾರದು' ಎಂದರು.

ಯೋಗರಾಜ್‌ಗೌಡ ಮಾತನಾಡುತ್ತಾ "ಪದವಿ ಮುಗಿಯಿತು ಎಂದ ತಕ್ಷಣವೇ ಎಲ್ಲವೂ ಮುಗಿದಿರುವುವುದಿಲ್ಲ, ಅಂದಿನಿಂದಲೇ ವಿದ್ಯಾರ್ಥಿಗಳ ಜವಾಬ್ದಾರಿ ಹೆಚ್ಚಾಗುತ್ತದೆ. ಜಗತ್ತು ತುಂಬಾ ಸ್ಪರ್ಧಾತ್ಮಕವಾಗಿದೆ. ವೃತ್ತಿಯಲ್ಲಿ ಗಟ್ಟಿಯಾಗಿ ಉಳಿಯಬೇಕು ಎಂದರೆ ಹೆಚ್ಚಿನ ಜ್ಞಾನವನ್ನು ಸಂಪಾದಿಸುತ್ತಲೇ ಇರಬೇಕು. ಅದರಲ್ಲೂ ವಿಶೇಷವಾಗಿ ವೈದ್ಯಕೀಯ ಕ್ಷೇತ್ರದಲ್ಲಿ ಇಂತಹ ಅಧ್ಯಯನಕ್ಕೆ ಆದ್ಯತೆಯಿದೆ" ಎಂದರು.

■ ಕೆ.ಎಸ್. ರಾಜಮನ್ನಾರ್

## ಅಂತಾರಾಷ್ಟ್ರೀಯ ಶುಶ್ರೂಷಕರ ದಿನಾಚರಣೆ

# 'ನಮ್ಮ ಶುಶ್ರೂಷಕರು – ನಮ್ಮ ಭವಿಷ್ಯ'

ನರ್ಸಿಂಗ್ ಕ್ಷೇತ್ರದಲ್ಲಿ ಶುಶ್ರೂಷಕರಾಗಲು ಅಗತ್ಯವಾದ ಗುಣಗಳನ್ನು ಬೆಳೆಸಿಕೊಳ್ಳಬೇಕು. ಹಾಗೂ ನರ್ಸಿಂಗ್ ಕ್ಷೇತ್ರದಲ್ಲಿ ಹೆಚ್ಚು–ಹೆಚ್ಚು ಕಲಿಕಾ ಪ್ರಯೋಗಗಳನ್ನು ಒಳಗೊಳ್ಳಬೇಕು ಹಾಗೂ ವಿದ್ಯಾರ್ಥಿಗಳು ಜೀವನದಲ್ಲಿ ಲಭಿಸುವ ಅವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್‌ರವರು ತಿಳಿಸಿದರು.

ನಗರದ ಶ್ರೀದೇವಿ ನರ್ಸಿಂಗ್ ಕಾಲೇಜು ಹಾಗೂ ಶ್ರೀ ರಮಣಮಹರ್ಷಿ ನರ್ಸಿಂಗ್ ಕಾಲೇಜು, ಶ್ರೀದುರ್ಗಾಂಬಾ ಸ್ಕೂಲ್ ಆಫ್ ನರ್ಸಿಂಗ್ ಕಾಲೇಜಿನ ಆಶ್ರಯದಲ್ಲಿ "ಅಂತಾರಾಷ್ಟ್ರೀಯ ಶುಶ್ರೂಷಕರ ದಿನಾಚರಣೆ"ಯನ್ನು ಮೇ 12ರಂದು ಕಾಲೇಜಿನ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಮುಖ್ಯಅತಿಥಿಗಳಾಗಿ ಆಗಮಿಸಿದ್ದ ತುಮಕೂರಿನ ಜಿಲ್ಲಾಸ್ಪತ್ರೆಯ ನರ್ಸಿಂಗ್ ಅಧೀಕ್ಷಕರಾದ ಗಾಯತ್ರಿರವರು ಮಾತನಾಡುತ್ತಾ

2025ರ ಶುಶ್ರೂಷಕ ದಿನಾಚರಣೆಯ ಧ್ಯೇಯವಾಕ್ಯ 'ನಮ್ಮ ಶುಶ್ರೂಷಕರು, ನಮ್ಮ ಭವಿಷ್ಯ' ಎಂದಿದೆ. ನರ್ಸಿಂಗ್ ಕ್ಷೇತ್ರದಲ್ಲಿ ಕೌಶಲವನ್ನು ಗಳಿಸಿಕೊಂಡರೆ, ನಿಮ್ಮ ವೃತ್ತಿಯಲ್ಲಿ ಹೆಸರುಗಳಿಸಬಹುದು ಮತ್ತು ಮಾನವ ಕುಲಕ್ಕೆ ಸೇವೆಯನ್ನು ಮಾಡಬಹುದು.

ಜನವರಿ 1974 ರಲ್ಲಿ ಆಧುನಿಕ ನರ್ಸಿಂಗ್ ಸಂಸ್ಥಾಪಕಿಯಾದ ಫ್ಲಾರೆನ್ಸ್ ನೈಟಿಂಗೇಲ್ ಅವರ ಜನ್ಮ ದಿನದ ಅಂಗವಾಗಿ ಮೇ.12ರನ್ನು ನರ್ಸಿಂಗ್ ದಿನವನ್ನಾಗಿ ಆಚರಿಸಲಾಗಿದೆ ಎಂದು ಅವರು ಹೇಳಿದರು.



ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್, ಶ್ರೀಮತಿ ಗಾಯತ್ರಿ, ಪ್ರೊ.ಉಷಾ.ಎಸ್. ಪ್ರೊ.ಆರ್.ಕೆ.ಮುನಿಸ್ವಾಮಿ ಮತ್ತು ಪ್ರೊ.ಅಂಬಾ ಮುಂತಾದವರು ಉಪಸ್ಥಿತರಿದ್ದರು.

ಶ್ರೀರಮಣ ಮಹರ್ಷಿ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಉಷಾ.ಎಸ್.ಅವರು "ಶುಶ್ರೂಷಕರು ಆಸ್ಪತ್ರೆಗೆ ಬರುವ ಪ್ರತಿಯೊಬ್ಬರನ್ನೂ ಮಾನವೀಯತೆಯಿಂದ ಕಾಣಬೇಕು. ವೈದ್ಯರು ಹಾಗೂ ರೋಗಿಗಳ ಮಧ್ಯೆ ಶುಶ್ರೂಷಕರು ಸೇತುವೆಯಾಗಿ ಕಾರ್ಯನಿರ್ವಹಿಸಬೇಕು ಎಂದರು. ಶ್ರೀದೇವಿ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಆರ್.ಕೆ.ಮುನಿಸ್ವಾಮಿ ಅವರು "ಕಾಲೇಜಿನ ಮೂಲಭೂತ ಸೌಲಭ್ಯವನ್ನು ಸದುಪಯೋಗಪಡಿಸಿಕೊಂಡು ಹೆಚ್ಚು–ಹೆಚ್ಚು ಕಲಿಕಾ ಪ್ರಯೋಗಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳು ಜೀವನದಲ್ಲಿ ಜ್ಞಾನವನ್ನು, ನೈಪುಣ್ಯವನ್ನು ಗಳಿಸಿಕೊಳ್ಳಬೇಕು" ಎಂದರು.

ಶ್ರೀದುರ್ಗಾಂಬಾ ಸ್ಕೂಲ್ ಆಫ್ ನರ್ಸಿಂಗ್ ಪ್ರಾಂಶುಪಾಲೆ ಪ್ರೊ.ಅಂಬಾ ಅವರು "ಜಗತ್ತಿನಲ್ಲಿ ಆರೋಗ್ಯ ವಲಯ ವಿಸ್ತಾರಗೊಳ್ಳುತ್ತಿದ್ದು ಅದರಂತೆ ನರ್ಸಿಂಗ್ ಸೇವೆಗೂ ಬೇಡಿಕೆ ಹೆಚ್ಚಾಗುತ್ತಿದೆ" ಎಂದರು.



■ ವರದಿ: ಎನ್. ಆನಂದ

# ಶಿಕ್ಷಣಕ್ಕೆ ಒತ್ತಾಸೆ: 400 ವಿದ್ಯಾರ್ಥಿಗಳಿಗೆ ಶ್ರೀದೇವಿ ಸ್ಕಾಲರ್‌ಶಿಪ್

ಮೇ 17ರಂದು (2025ರ) ಇಂಜಿನಿಯರಿಂಗ್ ಕಾಲೇಜು ಅಂಗಳದಲ್ಲಿ ಪೋಷಕರು, ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರ ಸಮಾಗಮ. ಒಂದು ಬಗೆಯ ಸಡಗರ, ಸಂಭ್ರಮ ಮತ್ತು ಮನೆಯ ಹಬ್ಬದ ನಡೆಯುತ್ತಿದೆ ಎಂಬ ವಾತವರಣ. ಅದಕ್ಕೆ ಕಾರಣವಿಷ್ಟೆ;

ಸ್ಕಾಲರ್‌ಶಿಪ್ ಟೆಸ್ಟ್ – 2025ಗಾಗಿ ವಿದ್ಯಾರ್ಥಿಗಳು ಮತ್ತು ಪೋಷಕರು ಒಟ್ಟಾಗಿ ಸೇರಿದ್ದರು. ಹಾಗೆ ನೋಡಿದರೆ ಇದೇನೂ ಹೊಸದಲ್ಲ. ಕಳೆದ 10 ವರ್ಷಗಳಿಂದಲೂ ಈ ಪರಿಪಾಠವನ್ನು ಶ್ರೀದೇವಿತಾಂತ್ರಿಕ ಸಂಸ್ಥೆ ಪಾಲಿಸಿಕೊಂಡು ಬರುತ್ತಿದೆ. ಇದರ ಮುಖ್ಯ ಉದ್ದೇಶ ಗ್ರಾಮೀಣ ಭಾಗದ ಪ್ರತಿಭಾವಂತ ವಿದ್ಯಾರ್ಥಿಗಳು ಆರ್ಥಿಕ ಮುಗ್ಗಟ್ಟಿನ ಕಾರಣ ಉನ್ನತ ಶಿಕ್ಷಣದಿಂದ ವಂಚಿತರಾಗಬಾರದು ಎನ್ನುವುದೇ ಆಗಿದೆ.

ಇಂಜಿನಿಯರಿಂಗ್ ಮತ್ತು ಪ್ಯಾರಾಮೆಡಿಕಲ್ ಕೋರ್ಸ್‌ಗಳ ಪ್ರವೇಶ ಮತ್ತು ಶ್ರೀದೇವಿ ಸ್ಕಾಲರ್‌ಶಿಪ್ ಟೆಸ್ಟ್‌ಅನ್ನು ಒಂದೇ ವೇದಿಕೆಯಲ್ಲಿ ಏರ್ಪಡಿಸಿದ್ದರಿಂದ ವಿದ್ಯಾರ್ಥಿಗಳಿಗೆ ಏಕಕಾಲದಲ್ಲಿ ಪೋಷಕರ ಸಮ್ಮುಖದಲ್ಲೇ ಮೂರು ಆಯ್ಕೆ ಮಾಡಿಕೊಳ್ಳುವ ಸುವರ್ಣ ಅವಕಾಶ ದೊರಕಿತ್ತು.

## ಶ್ರದ್ಧಾವಂತ, ಶ್ರಮಜೀವಿ, ಬುದ್ಧಿವಂತ ಯುವಜನಾಂಗಕ್ಕೆ ಅವಕಾಶಗಳು ಸಾವಿರಾರು

**ಸ್ಕಾಲರ್‌ಶಿಪ್ ಟೆಸ್ಟ್– 2025 ಆನ್‌ಲೈನ್ ಪರೀಕ್ಷೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ.ಎಂ.ಆರ್.ಹುಲಿನಾಯ್ಕರ್ ಒಟ್ಟಾರೆ ಹೇಳಿದ್ದಿಷ್ಟು:**

– ಬಡತನ ಶಿಕ್ಷಣಕ್ಕೆ ಅಡ್ಡಿಯಾಗಬಾರದು. ಪ್ರತಿ ವರ್ಷ 25 ಲಕ್ಷ ವಿದ್ಯಾರ್ಥಿಗಳು ನೀಟ್ ಪರೀಕ್ಷೆಗೆ ಹಾಜರಾಗುತ್ತಾರೆ. ಆದರೆ ಒಂದು ಲಕ್ಷ ವಿದ್ಯಾರ್ಥಿಗಳಿಗೆ ಮಾತ್ರ ವೈದ್ಯಕೀಯ ಕೋರ್ಸುಗಳಿಗೆ ಪ್ರವೇಶ ಲಭ್ಯವಾಗಲಿದೆ. ಉಳಿದ 24 ಲಕ್ಷ ವಿದ್ಯಾರ್ಥಿಗಳು ಬೇರೆ ಬೇರೆ ಕೋರ್ಸುಗಳನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಶ್ರೀದೇವಿ ಕಾಲೇಜಿನಲ್ಲಿ ಹನ್ನೊಂದು ಪ್ಯಾರಾಮೆಡಿಕಲ್ ಕೋರ್ಸುಗಳಿದ್ದು, ಅವುಗಳ ಮೂಲಕ ಉತ್ತಮ ಭವಿಷ್ಯ ರೂಪಿಸಿಕೊಳ್ಳುವ ಅವಕಾಶವಿದೆ. ಇಲ್ಲಿನ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಮತ್ತು ಅವರಿಗೆ ಉತ್ತಮ ಭವಿಷ್ಯ ಕಟ್ಟಿಕೊಡುವ ನಿಟ್ಟಿನಲ್ಲಿ ಕಾಲೇಜು ಆಡಳಿತ ಮಂಡಳಿ ಪೂರ್ಣ ಜವಾಬ್ದಾರಿ ತೆಗೆದುಕೊಳ್ಳಲಿದೆ.

ಕಳೆದ 20 ವರ್ಷಗಳಲ್ಲಿ ಭಾರತ ಎಲ್ಲ ಕ್ಷೇತ್ರಗಳಲ್ಲಿ ಅಮೋಘ ಸಾಧನೆ ಮಾಡಿದೆ. ಆರ್ಥಿಕ ವಲಯದಲ್ಲೂ ನಿರೀಕ್ಷೆಗೂ ಮೀರಿದ ಪ್ರಗತಿ ಸಾಧಿಸಲಾಗಿದೆ. ಭಾರತ ಈಗ ಜಗತ್ತಿನಐದನೇ ಬೃಹತ್‌ಆರ್ಥಿಕ ಶಕ್ತಿಶಾಲಿ ರಾಷ್ಟ್ರವಾಗಿ ಹೊರಹೊಮ್ಮಿದ್ದು, ಇನ್ನು ಕೆಲವೇ ವರ್ಷಗಳಲ್ಲಿ ವಿಶ್ವದ ಮೂರನೇ ಬಲಿಷ್ಠ ಆರ್ಥಿಕ ರಾಷ್ಟ್ರವಾಗುವ ದಾರಿಯಲ್ಲಿದೆ. ಇದಕ್ಕೆ ನಮ್ಮ ಶಿಕ್ಷಣವೇ ಕಾರಣ. ಕೋವಿಡ್ ನಂತರ ಜನರಲ್ಲಿ ಆರೋಗ್ಯದ ಬಗ್ಗೆ ಜಾಗೃತಿ ಹೆಚ್ಚಾಗಿದೆ. ಹೀಗಾಗಿ ವಿಶ್ವದಾದ್ಯಂತ ಪ್ಯಾರಾಮೆಡಿಕಲ್ ಕೋರ್ಸ್‌ಗಳಿಗೆ ಬೇಡಿಕೆ ಹೆಚ್ಚುತ್ತಿದೆ.

ವಿಶ್ವದ ಹಲವು ರಾಷ್ಟ್ರಗಳಲ್ಲಿ ವ್ಯಾಪಕ ಪ್ರಮಾಣದ ಉದ್ಯೋಗ ದೊರೆಯುತ್ತಿದೆ. ಈ ಹಿನ್ನೆಲೆಯಲ್ಲಿ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಸೀಟು ಲಭ್ಯವಾಗದ ವಿದ್ಯಾರ್ಥಿಗಳು ಎದೆಗುಂದಬೇಕಿಲ್ಲ. ಭವಿಷ್ಯ ರೂಪಿಸಿಕೊಳ್ಳಲು ಹಲವು ಹೊಸ ಕೋರ್ಸುಗಳು ನೆರವಿಗೆ ಬರಲಿವೆ.

ಜಗತ್ತಿನ ಅನೇಕ ಮುಂದುವರಿದ ರಾಷ್ಟ್ರಗಳಲ್ಲಿ ಕೋವಿಡ್ ಪರಿಸ್ಥಿತಿಯನ್ನು ಸರಿಯಾಗಿ ನಿಭಾಯಿಸಲಾಗದೆ ಲಕ್ಷಾಂತರ ಮಂದಿ ಜೀವ ಕಳೆದುಕೊಳ್ಳುವಂತಾಯಿತು. ಆದರೆ ಭಾರತದಲ್ಲಿ ಮಾತ್ರ ಅಂತಹ ಪರಿಸ್ಥಿತಿ ಬರಲಿಲ್ಲ ಸರ್ಕಾರ ತೆಗೆದುಕೊಂಡ ದಿಟ್ಟ ಕ್ರಮಗಳು ಹಾಗೂ ಆರೋಗ್ಯ ಕಾರ್ಯಕರ್ತರು ವೈದ್ಯರು ತೆಗೆದುಕೊಂಡ ಸಕಾಲಿಕ ಕ್ರಮಗಳಿಂದಾಗಿ ಜೀವ ಹಾನಿ ತಡೆಗಟ್ಟಲು ಸಾಧ್ಯವಾಯಿತು. ಹೀಗಾಗಿ ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಬೇಡಿಕೆ ಇದೆ. ಅಮೆರಿಕ ಬಳಸುವ ಪ್ರತಿಶತ 80ರಷ್ಟು ಔಷಧಿ ಹಾಗೂ ಮಾತ್ರೆಗಳು ಭಾರತದಿಂದಲೇ ತಯಾರಾಗಿ ಹೋಗುತ್ತವೆ ಎಂದರೆ ಭಾರತದ ಔಷಧಿ ಕ್ಷೇತ್ರಕ್ಕೆ ಇರುವ ಮಹತ್ವ ಏನು ಎಂಬುದು ಅರ್ಥವಾಗುತ್ತದೆ. ಅದರಲ್ಲೂ ವಿಶೇಷವಾಗಿ ಕೋವಿಡ್ ಸಮಯದಲ್ಲಿ ಜಗತ್ತಿನ 150ಕ್ಕೂ ಹೆಚ್ಚು ರಾಷ್ಟ್ರಗಳಿಗೆ ಭಾರತ ಲಸಿಕೆಯನ್ನು ನೀಡಿ ಆರೋಗ್ಯ ವಲಯದಲ್ಲಿ ತನ್ನ ಶಕ್ತಿ ಹಾಗೂ ಸಾಮರ್ಥ್ಯ ಏನು ಎಂಬುದನ್ನು ಸಾಬೀತುಪಡಿಸಿದೆ.




## ಜನಹಿತದ ಹಾದಿಯಲ್ಲಿ

“ಸಾಧಾರಣ ಕುಟುಂಬದಿಂದ ಬಂದ ಡಾ.ಹುಲಿನಾಯ್ಕರ್‌ರವರು ತುಮಕೂರಿನಲ್ಲಿ ಸಣ್ಣದಾಗಿ ನರ್ಸಿಂಗ್ ಕಾಲೇಜು ಆರಂಭಿಸಿ, ತದನಂತರ ಇಂಜಿನಿಯರಿಂಗ್ ಮೆಡಿಕಲ್, ಐಟಿಐ, ಡಿಪ್ಲೊಮಾ ಮತ್ತು ಪ್ಯಾರಾ ಮೆಡಿಕಲ್ ಕೋರ್ಸ್ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದ್ದಾರೆ. ಬಡತನದ ಕಾರಣದಿಂದ ಪ್ರತಿಭಾನ್ವಿತ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗಬಾರದು. ಅದರಲ್ಲೂ ಮುಖ್ಯವಾಗಿ ಉನ್ನತ ಶಿಕ್ಷಣದಿಂದ ದೂರ ಉಳಿಯಬಾರದು ಎಂಬ ಕಾರಣದಿಂದಾಗಿ ಸಂಸ್ಥೆಗಳನ್ನು ಕಟ್ಟಿ ಲಕ್ಷಾಂತರ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ನೀಡುವ ಮೂಲಕ ಶಿಕ್ಷಣ ರಂಗಕ್ಕೆ ಅಮೂಲ್ಯ ಕೊಡುಗೆ ನೀಡಿದ್ದಾರೆ.

– ಎಂ.ಎಸ್ ಪಾಟೀಲ್, ಮಾನವ ಸಂಪನ್ಮೂಲ– ಐಟಿ ನಿರ್ದೇಶಕ




ಸಿಬಿಎಸ್‌ಇ 10ನೇ ತರಗತಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಮೂರನೇ ರ್‍ಯಾಂಕ್ ಗಳಿಸಿದ ತುಮಕೂರು ಜಿಲ್ಲೆಯ ಕೊರಟಗೆರೆ ವಿದ್ಯಾರ್ಥಿ ರೋಚನ್ ನಾಗ್ ಅವರನ್ನು ಶ್ರೀದೇವಿ ಶಿಕ್ಷಣ ಸಂಸ್ಥೆ ವತಿಯಿಂದ ಸನ್ಮಾನಿಸಲಾಯಿತು.

ಇಂಜಿನಿಯರಿಂಗ್ ಮತ್ತು ಪ್ಯಾರಾಮೆಡಿಕಲ್ ಕೋರ್ಸುಗಳ ಪ್ರವೇಶಕ್ಕಾಗಿ ಆನ್‌ಲೈನ್ ಟೆಸ್ಟ್ ನಡೆಸಲಾಯಿತು. ದಾವಣಗೆರೆ, ಗದಗ, ನವಲಗುಂದ, ಚಿಕ್ಕಮಗಳೂರು, ಯಾದಗಿರಿ, ಕುಣಿಗಲ್, ಚಿತ್ರದುರ್ಗ, ಮಂಡ್ಯ, ಹಾಸನ, ತುಮಕೂರು, ಮಧುಗಿರಿ, ಕೊರಟಗೆರೆ, ಶಿರಾ, ಗುಬ್ಬಿ, ತಿಪಟೂರು, ಚಿಕ್ಕನಾಯಕನಹಳ್ಳಿ ಸೇರಿದಂತೆ ರಾಜ್ಯದ ನಾನಾ ಭಾಗಗಳ ಪೋಷಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಆನ್‌ಲೈನ್ ಟೆಸ್ಟ್‌ನಲ್ಲಿ ಮೊದಲ 15 ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಸ್ಥಳದಲ್ಲೇ ಸರ್ಟಿಫಿಕೇಟ್ ವಿತರಿಸಲಾಯಿತು. ಮೊದಲ 10 ರ್‍ಯಾಂಕ್ ಗಳಿಸಿದ ವಿದ್ಯಾರ್ಥಿಗಳಿಗೆ ತಲಾ 4 ಲಕ್ಷರೂಪಾಯಿ ಹಾಗೂ 11 ರಿಂದ 14 ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ತಲಾ 3 ಲಕ್ಷ ರೂಪಾಯಿ ಸ್ಕಾಲರ್‌ಶಿಪ್ ನೀಡುವುದಾಗಿ ಘೋಷಿಸಲಾಯಿತು.

ಆರಂಭದಲ್ಲಿ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ. ನರೇಂದ್ರ ವಿಶ್ವನಾಥ್ ಮಾತನಾಡಿ, ಕಾಲೇಜಿಗೆ ಸೇರಿದರೆ ವಿದ್ಯಾರ್ಥಿಗಳ ಭವಿಷ್ಯ ಹೇಗೆ ಉತ್ತಮವಾಗುತ್ತದೆ, 4 ವರ್ಷದಲ್ಲಿ ಯಾವೆಲ್ಲಾ ರೀತಿಯ ತರಬೇತಿ ನೀಡಲಾಗುತ್ತದೆ ಎಂಬುದನ್ನು ಎಳೆ ಎಳೆಯಾಗಿ ವಿವರಿಸಿದರು.

**ಮೊದಲ 15 ರ್‍ಯಾಂಕ್ ವಿಜೇತರ ವಿವರ:**

ಆರ್ಯ.ಆರ್, ಬಿ.ಜೆ.ಮಾನಸ, ಸಿ.ಎಂ. ವರ್ಷಿಣಿ, ಅಬ್ದುಲ್‌ರಹಿಮ್, ಶ್ರೀವಿದ್ಯಾ ಡಿ. ಪಟೇಲ್, ಹೇಮಗಿರಿ ಪಂಡಿತ್, ಶಫಿಯಾ, ಪೂಜಾ.ಸಿ.ಕೆ., ಎನ್.ದಯಾನಂದ, ಅಮೀನಾ ತಬ್ಬಸ್ಸುಮ್, ಜೈ ಸೃಷ್ಟಿ ಕೆ.ಆರ್, ಆಶಾ.ಕೆ, ಪಲ್ಲವಿ.ಎಸ್, ಲಿಖಿತ ಟಿ.ಜಿ, ಮತ್ತು ವರಲಕ್ಷ್ಮಿ.ಸಿ.ಕೆ.

ಇದೇ ಸಂದರ್ಭದಲ್ಲಿ ಸಿ.ಬಿ.ಎಸ್.ಸಿ. 10ನೇ ತರಗತಿ ಪರೀಕ್ಷೆಯಲ್ಲಿ 3ನೇ ರ್‍ಯಾಂಕ್ ಗಳಿಸಿದ ವಿದ್ಯಾರ್ಥಿ ಕೊರಟಗೆರೆಯ ರೋಚನ್‌ನಾಗ್‌ನನ್ನು ಸಂಸ್ಥೆಯ ವತಿಯಿಂದ ಸನ್ಮಾನಿಸಲಾಯಿತು.

ಒಟ್ಟಾರೆಯಾಗಿ ಪೋಷಕರು– ವಿದ್ಯಾರ್ಥಿಗಳು ಉಪನ್ಯಾಸಕರ ಸಮಾಗಮಕ್ಕೆ ಕಾಲೇಜು ಅಂಗಳ ಸಾಕ್ಷಿಯಾಗಿ, ಶೈಕ್ಷಣಿಕ ವರ್ಷದ ಆರಂಭ ಎಂದರೆ ಹೀಗಿರಬೇಕು ಎಂಬ ಸಂತಸ ಭಾವ ಪೋಷಕರು ಹಾಗೂ ವಿದ್ಯಾರ್ಥಿಗಳೆಲ್ಲರಲ್ಲಿ ಮನೆ ಮಾಡಿತ್ತು.




**ತುಮಕೂರಿನ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜು ಮತ್ತು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ ಜಂಟಿಯಾಗಿ ಏರ್ಪಡಿಸಿದ್ದ 2025 –26ನೇ ಸಾಲಿನ ಬಾಲಕರ ಕೋ ಕೋ ಕ್ರೀಡಾಕೂಟವನ್ನು ಉದ್ಘಾಟಿಸಲಾಯಿತು. ಶ್ರೀದೇವಿ ಶಿಕ್ಷಣ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕ ಎಂ ಎಸ್ ಪಾಟೀಲ್, ವೀರ ಅಭಿಮನ್ಯು ಕೊಕ್ಕೋ ಪ್ರಶಸ್ತಿ ವಿಜೇತರಾದ ಮಹೇಶ್ ಕುಮಾರ್, ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ.ನರೇಂದ್ರ ವಿಶ್ವನಾಥ್, ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ದೈಹಿಕ ನಿರ್ದೇಶಕ ರಾಘವೇಂದ್ರ ಜಟ್ಟಿಣ್ ಉಪಸ್ಥಿತರಿದ್ದರು.**

# ಇಂಜಿನಿಯರಿಂಗ್ ಶಿಕ್ಷಣದಲ್ಲಿ ಸ್ಕಿಲ್ ಲ್ಯಾಬ್‌ಗಳ ಮಹತ್ತ್ವ




**ಕೈಗಾರಿಕೆಗಳ ಇಂದಿನ ಅಗತ್ಯಕ್ಕೆ ತಕ್ಕಂತೆ ಕೌಶಲವನ್ನು ರೂಡಿಸಿಕೊಳ್ಳಬೇಕು ಮತ್ತು ಯಾವುದೇ ಕಾರಣಕ್ಕೂ ಕೌಶಲದಿಂದ ವಂಚಿತರಾಗಬಾರದು ಎಂಬ ಉದ್ದೇಶದಿಂದ ಆಡಳಿತ ಮಂಡಳಿ ಒಂದು ಕೋಟಿ ರೂಪಾಯಿ ವಿನಿಯೋಗಿಸಿ ಸುಸಜ್ಜಿತ ಪ್ರಯೋಗಾಲಯಗಳನ್ನು ಸ್ಥಾಪಿಸಿದೆ. ಸಂಸ್ಥಾಪಕ ಅಧ್ಯಕ್ಷ ಡಾ. ಎಂ.ಆರ್. ಹುಲಿನಾಯ್ಕರ್, ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ, ಎಂ.ಎಸ್. ಪಾಟೀಲ್, ಕಾಲೇಜಿನ ಟ್ರಸ್ಟಿ ಅಂಬಿಕಾ ಹುಲಿನಾಯ್ಕರ್, ಪ್ರಿನ್ಸಿಪಾಲ್ ಡಾ. ನರೇಂದ್ರ ವಿಶ್ವನಾಥ್ ಅವರುಗಳ ನಿರಂತರ ಮಾರ್ಗದರ್ಶನ ಮತ್ತು ಸಂಘಟಿತ ಪ್ರಯತ್ನದಿಂದಾಗಿ ಶ್ರೀದೇವಿ ತಾಂತ್ರಿಕ ಮಹಾವಿದ್ಯಾಲಯ ರಾಜ್ಯದ ಅತ್ಯುತ್ತಮ ಇಂಜಿನಿಯರಿಂಗ್ ಕಾಲೇಜು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.**

▶▶ ಮೊದಲನೇ ಪುಟದಿಂದ

ಆದರೆ ತುಮಕೂರಿನ ಪ್ರತಿಷ್ಠಿತ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜು ಈ ಸಮಸ್ಯೆಯ ಮೂಲಕಾರಣವನ್ನು ಅರ್ಥಮಾಡಿಕೊಂಡು ಇದಕ್ಕೆ ಬೇಕಾದ ವಾತಾವರಣವನ್ನು ರೂಪಿಸಿ ರಾಜ್ಯದಲ್ಲಿಯೇ ಅಗ್ರಶ್ರೇಣಿಯ ಕಾಲೇಜಾಗಿದೆ. ನುರಿತ ಸಂಪನ್ಮೂಲವ್ಯಕ್ತಿಗಳು, ಕೈಗಾರಿಕಾ ಪ್ರತಿನಿಧಿಗಳಿಂದ ಉದ್ಯಮಗಳ ಬೇಡಿಕೆಗೆ ತಕ್ಕಂತೆ ಅರವತ್ತು ದಿನಗಳ ಕೌಶಲ ತರಬೇತಿಯನ್ನು ವಿದ್ಯಾರ್ಥಿಗಳಿಗೆ ಅವರ ಕೋರ್ಸ್ ಮುಗಿಯುವುದರೊಳಗೆ ನೀಡಲಾಗುತ್ತಿದೆ. ಇದರ ಪರಿಣಾಮವೆಂದರೆ, ಶ್ರೀದೇವಿ ಕಾಲೇಜಿನ ವಿದ್ಯಾರ್ಥಿ ಎಂದು ಹೇಳಿದೊಡನೆಯೇ ಕೆಲಸಕ್ಕೆ ಸೇರಿಸಿಕೊಳ್ಳಬಹುದು ಎಂಬ ಭರವಸೆ ಕೈಗಾರಿಕಾ ವಲಯದಲ್ಲಿ ಮೂಡುವಷ್ಟರ ಮಟ್ಟಿಗೆ ಈ ಕಾಲೇಜು ಪ್ರಸಿದ್ಧಿಯನ್ನು ಪಡೆದಿದೆ. ಇದಕ್ಕೆ ಮುಖ್ಯ ಕಾರಣ ಇಲ್ಲಿರುವ ಸ್ಕಿಲ್‌ಲ್ಯಾಬ್. ಈ ಕಾಲೇಜಿನಲ್ಲಿ ಒಂದಲ್ಲ ಎರಡಲ್ಲ, ಹಲವು ಸ್ಕಿಲ್‌ಲ್ಯಾಬ್‌ಗಳಿವೆ. ಪ್ರತಿ ವಿದ್ಯಾರ್ಥಿಯ ಆಲೋಚನೆಗಳನ್ನು ಕಾರ್ಯರೂಪಕ್ಕೆ ತರಲು ಬೇಕಾದ ಪೂರಕ ವಾತಾವರಣ, ಮತ್ತು ಮೂಲಸೌಕರ್ಯಗಳನ್ನು ಕಾಲೇಜಿನ ಕ್ಯಾಂಪಸ್ಸಿನಲ್ಲಿ ನಿರ್ಮಿಸಿರುವುದು ಇಲ್ಲಿನ ವೈಶಿಷ್ಟ್ಯವಾಗಿದೆ. ಸುಮಾರು ಒಂದುಕೋಟಿ ರೂಪಾಯಿ ವೆಚ್ಚದಲ್ಲಿ ವಿದ್ಯಾರ್ಥಿಗಳಿಗಾಗಿಯೇ ವಿವಿಧ ಬಗೆಯ ಸ್ಕಿಲ್‌ಲ್ಯಾಬ್ ನಿರ್ಮಾಣವಾಗಿದೆಯೆಂದರೆ ಕೌಶಲದ ಅಭಿವೃದ್ಧಿಗೆ ಕಾಲೇಜು ಎಷ್ಟು ಪ್ರಾಮುಖ್ಯವನ್ನು ನೀಡಿದೆ ಎಂಬುದು ಅರಿವಾಗಲಿದೆ.

### ಸ್ಕಿಲ್ ಅಂಡ್ ಕೆರಿಯರ್ ಡೆವಲಪ್‌ಮೆಂಟ್ ಸೆಲ್ (skill and carrer devolpment cell):

ಕೈಗಾರಿಕೆಗಳ ಅಗತ್ಯಕ್ಕೆ ಬೇಕಿರುವ ಕೌಶಲ ವಿದ್ಯಾರ್ಥಿಗಳಲ್ಲಿ ಇಲ್ಲದೆ ಇರುವುದನ್ನು ಮನಗಂಡ ಆಡಳಿತ ಮಂಡಳಿಯು ಕಾಲೇಜಿನ ವಿದ್ಯಾರ್ಥಿಗಳು ಎಲ್ಲ ರೀತಿಯ ಕೌಶಲಗಳನ್ನೂ ಬೆಳೆಸಿಕೊಳ್ಳಬೇಕು ಮತ್ತು ಮುಂದಿನ ವೃತ್ತಿಜೀವನ್ನು ಸಮರ್ಥವಾಗಿ ನಿರ್ವಹಿಸಬೇಕು ಎಂಬ ಉದ್ದೇಶದಿಂದ 2022ರಲ್ಲಿ ಸ್ಕಿಲ್ ಅಂಡ್ ಕೆರಿಯರ್ ಡೆವಲಪ್‌ಮೆಂಟ್ ಸೆಲ್‌ನ್ನು ಸ್ಥಾಪಿಸಿತು.

ಇದರ ಮೂಲಕ AWS, Devops ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಟೆಕ್ನಾಲಜಿಯ ಬಗೆಗೆ ವಿದ್ಯಾರ್ಥಿಗಳಿಗೆ ಪ್ರಾಯೋಗಿಕವಾಗಿ ಹೇಳಿಕೊಡುವ ಪರಿಪಾಠವನ್ನು ಆರಂಭಿಸಲಾಯಿತು.

ಅದೇ ವರ್ಷ ಡಿಸೆಂಬರ್ ತಿಂಗಳಲ್ಲಿ ಸೆಂಟರ್ ಆಫ್ ಎಕ್ಸಲೆನ್ಸ್ ಇನ್ ಕ್ಲೌಡ್ ಕಂಪ್ಯೂಟಿಂಗ್ ಪ್ರಯೋಗಾಲಯವನ್ನು ಆರಂಭಿಸಲಾಯಿತು. ಇದರಲ್ಲಿ ಅತ್ಯಾಧುನಿಕ ತಂತ್ರಜ್ಞಾನವಾದ ಕ್ಲೌಡ್ ಕಂಪ್ಯೂಟಿಂಗ್ ಮತ್ತು ಕುಬೆರ್‌ನೆಟ್ಸನ್ನು (Kubernetes) ಬಳಸಲಾಗುತ್ತಿದೆ.

ಈ ಕುಬೆರ್‌ನೆಟ್ಸನ್ನು ಸಾಮಾನ್ಯವಾಗಿ ಕಂಪನಿಗಳು ಬಳಸುತ್ತವೆ. ಈ ಟೆಕ್ನಾಲಜಿಯು ವಿದಾ–್ಯರ್ಥಿಗಳಿಗೆ ಉದ್ಯೋಗ ದೊರಕಿಸಿಕೊಳ್ಳಲು ಹೆಚ್ಚು ಉಪಯೋಗವಾಗುತ್ತದೆ. ಇಂತಹ ಸುಸಜ್ಜಿತ ಪ್ರಯೋಗಾಲಯ ಸ್ಥಾಪಿಸಿರುವುದು ಶ್ರೀದೇವಿ ಕಾಲೇಜಿನ ವಿದ್ಯಾರ್ಥಿಗಳೇ ಎಂದು ಕೇಳಿಕೊಳ್ಳುವುದು ಬಹಳ ಸಂತೋಷದ ವಿಚಾರ. ಈ ಪ್ರಯೋಗಾಲಯವನ್ನು ಅತ್ಯಂತ ಕಡಿಮೆ ವೆಚ್ಚದಲ್ಲಿ ಹಾಗೂ ಅತಿ ಕಡಿಮೆ ವಿದ್ಯುತ್ ಬಳಕೆಮಾಡಿಕೊಂಡು ಹೆಚ್ಚು ಉಪಯೋಗ ಪಡೆದುಕೊಳ್ಳುತ್ತಿರುವುದು ಇದರ ವಿಶೇಷವಾಗಿದೆ ಎಂದು ಇಂಜಿನಿಯರಿಂಗ್ ಕಾಲೇಜಿನ ಎಐ ಮತ್ತು ಡೇಟಾ ಸೈನ್ಸ್ ವಿಭಾಗದ ಮುಖ್ಯಸ್ಥ ಡಾ. ಎಲ್. ಗಿರೀಶ್ ವಿವರಿಸುತ್ತಾರೆ. ಈ ಪ್ರಯೋಗಾಲಯವನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಡಾ. ವಿದ್ಯಾಶಂಕರ್ ಉದ್ಘಾಟಿಸಿದರು. ಅದೇ ದಿನ ಟೆಕ್ನಿಕಲ್ ಸ್ಟೂಡೆಂಟ್ ಕ್ಲಬ್‌ಗೂ ಅವರೇ ಚಾಲನೆ ನೀಡಿದರು. ಇದರ ಮುಖ್ಯ ಉದ್ದೇಶ ಏನೆಂದರೆ ವಿದಾ–್ಯರ್ಥಿಗಳಿಂದ ವಿದ್ಯಾರ್ಥಿಗಳಿಗೆ ಬೋಧನೆ ಮಾಡಿಸುವುದು ಅಂದರೆ, ಅಂತಿಮ ವರ್ಷದ ವಿದ್ಯಾರ್ಥಿಗಳಿಂದ ಮೊದಲ ಮತ್ತು ಎರಡನೇ ವರ್ಷದ ವಿದ್ಯಾರ್ಥಿಗಳಿಗೆ ಪಾಠ ಮಾಡಿಸುವುದು, ಈ ಮೂಲಕ ಅವರಲ್ಲಿ ಕಲಿಕೆಯ ಬಗ್ಗೆ ಹೆಚ್ಚಿನ ಆಸಕ್ತಿ ಮೂಡುವಂತೆ ಮಾಡುವುದು, ಸವಾಲುಗಳನ್ನು ಎದುರಿಸಿ ನಾಯಕತ್ವದ ಗುಣಗಳನ್ನು ಅವರಲ್ಲಿ ಬೆಳೆಸಿ ಮುಂದಿನ ವೃತ್ತಿಗಳಿಗೆ ಅವರನ್ನು ಸಜ್ಜುಗೊಳಿಸುವುದು ಇದರ ಉದ್ದೇಶ.

ಸ್ಕಿಲ್‌ಲ್ಯಾಬ್‌ನ ವತಿಯಿಂದಲೇ ನವೋದ್ಯಮಗಳ ಬಗ್ಗೆ ವಿದ್ಯಾರ್ಥಿಗಳಿಗೆ ಹೆಚ್ಚಿನ ತಿಳುವಳಿಕೆಯನ್ನು ನೀಡಿ ಮಾರ್ಗದರ್ಶನ ಮಾಡುವ ಉದ್ದೇಶದಿಂದ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ಎಂ.ಎಸ್. ಪಾಟೀಲ್ ಹಾಗೂ ಅಂಬಿಕಾ ಹುಲಿನಾಯ್ಕರ್ ಮತ್ತು ಕಾಲೇಜು ಸಂಸ್ಥಾಪಕರಾದ ಡಾ. ಎಂ.ಆರ್. ಹುಲಿನಾಯ್ಕರ್ ಅವರ ಮಾರ್ಗದರ್ಶನದಲ್ಲಿ ಶ್ರೀಟೆಕ್ ಇನ್ನೋವೇಶನ್ ಎಂಬ ಸ್ಟಾರ್ಟ್‌ಅಪ್ ಕಂಪನಿ ಆರಂಭಿಸಲಾಯಿತು. ಇದರಿಂದ ಸಂಸ್ಥೆಯಲ್ಲಿ ಬಳಸುವ ಕೆಲವು ಸಾಫ್ಟ್‌ವೇರ್‌ಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಶ್ರೀದೇವಿ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಗಳ ಹೆಲ್ಪ್ ಡೆಸ್ಕ್ library management website ಗಳಲ್ಲೂ ಇದನ್ನೇ ಬಳಸಲಾಗುತ್ತಿದೆ.

### ಹತ್ತು ದಿನಗಳ ಸ್ಕಿಲ್ ಕಾನ್‌ಕ್ಲೇವ್

ಹತ್ತು ದಿನಗಳ ಕಾಲ ಕಾಲೇಜಿನ ವಿದ್ಯಾರ್ಥಿಗಳಿಗೆ ನಾಲ್ಕು ತಾಂತ್ರಿಕ ವಿಭಾಗದಲ್ಲಿ ಮುಖ್ಯವಾಗಿ IoT, ಡೇಟಾಸೈನ್ಸ್, ಸೈಬರ್ ಸೆಕ್ಯೂರಿಟಿ ಹಾಗೂ ವೆಬ್ ಡೆವೆಲಪ್‌ಮೆಂಟ್ ಬಗೆಗೆ ತರಬೇತಿಯನ್ನು ನೀಡಲಾಯಿತು. ಈ ಕಾರ್ಯಕ್ರಮಕ್ಕೆ ಐಟಿ ವಲಯದ ದಿಗ್ಗಜರಾದ ಉತ್ತರಪ್ರದೇಶದ ಅಂಕಿತ್‌ಸಿಂಗ್, ಹೈದರಾಬಾದಿನ ಸಾಯಿ ಸತೀಶ್ ಪಂಜಾಬಿನ ರೋಹಿತ್‌ಸಿಂಗ್ ರಾಥೋಡ್ ಮತ್ತು ವಿಶ್ವದ ಮೊದಲ ಟಿ.ಇ. kaggle woman grand master winner ಉಷಾ ರಂಗರಾಜು ಮೊದಲಾದ ಸಂಪನ್ಮೂಲ ವ್ಯಕ್ತಿಗಳನ್ನು ಆಹ್ವಾನಿಸಿ ಅವರಿಂದ ಪ್ರಾಯೋಗಿಕ ತರಬೇತಿ, ಉಪನ್ಯಾಸಗಳನ್ನು ಏರ್ಪಡಿಸಲಾಗಿತ್ತು. ಇದರಲ್ಲಿ 300ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಎಲ್ಲ ವಿದ್ಯಾರ್ಥಿಗಳಿಗೆ ಪಾರ್ಟಿಸಿಪೇಷನ್ ಸರ್ಟಿಫಿಕೇಟ್‌ಗಳನ್ನು ನೀಡಲಾಯಿತು. ಕಾನ್‌ಕ್ಲೇವ್‌ನಲ್ಲಿ ಹ್ಯಾಕಥಾನ್, ಐಡಿಯಾಥಾನ್ ಎಂಬ ಎರಡು ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಹ್ಯಾಕಥಾನ್ ಎಂದರೆ ಒಂದು ವಿಷಯ ಕುರಿತು ಹೊಸ ಅವಿಷ್ಕಾರಗಳನ್ನು ಮಾಡಬೇಕು. ಐಡಿಯಾಥಾನ್ ಎಂದರೆ ಸ್ವಂತ ಆಲೋಚನೆಯಿಂದಲೇ ಹೊಸದನ್ನು ಪರಿಚಯಿಸಬೇಕು.

ಈ ಸ್ಕಿಲ್‌ಲ್ಯಾಬ್ ವತಿಯಿಂದ ಕಾಲೇಜಿನ ಎಲ್ಲಾ ಶಾಖೆಯ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಕೌಶಲಗಳ ತರಬೇತಿಯನ್ನು ಆಯೋಜಿಸಿದ್ದು ಪ್ರತಿಯೊಂದು ಸೆಮಿಸ್ಟರ್‌ನಲ್ಲಿಯೂ ಹತ್ತು ದಿನಗಳ ತರಬೇತಿಯನ್ನು ನೀಡಲಾಗುತ್ತಿದೆ. ವಿದ್ಯಾರ್ಥಿಗಳಿಗೆ ಅತ್ಯಾಧುನಿಕ ಟೆಕ್ನಾಲಜಿಗಳ ಬಳಕೆಯ ಬಗ್ಗೆ ತಜ್ಞರು ಮಾರ್ಗದರ್ಶನ ಮಾಡುತ್ತಾರೆ.

ಇದರ ಜೊತೆಗೆ ನಮ್ಮ ವಿದ್ಯಾರ್ಥಿಗಳು ಕೋಡಿಂಗ್ Platformಗಳಾದ ಲೀಟ್‌ಕೋಡ್ (Leet code), ಹ್ಯಾಕರ್ ರ್‍ಯಾಂಕ್‌ನಲ್ಲಿ (Hacker rank) ತಮ್ಮ ಕೋಡಿಂಗ್ ಪರಿಣತಿಯ ಬಗ್ಗೆ ತರಬೇತಿ ಪಡೆಯುತ್ತಿದ್ದಾರೆ.

ಈ ಎಲ್ಲ ತರಬೇತಿ ಮತ್ತು ಸೌಲಭ್ಯಗಳಿಂದಾಗಿ ಶ್ರೀದೇವಿ ಕಾಲೇಜಿನ ವಿದ್ಯಾರ್ಥಿಗಳು ರಾಷ್ಟ್ರೀಯ ಹ್ಯಾಕಥಾನ್ ಈವೆಂಟುಗಳಲ್ಲಿ ಪ್ರಥಮ ಸ್ಥಾನ ಪಡೆದಿರುವುದು ಮಹತ್ವದ ವಿಚಾರವಾಗಿದೆ. ಈ ಕಾಲೇಜಿನ ವಿದ್ಯಾರ್ಥಿಗಳು ಯಾವುದೇ ಆತಂಕ–ಅಳುಕುಗಳಿಲ್ಲದೆ ಅನೇಕ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದಾರೆ. ಕೌಶಲ ತರಬೇತಿಯಿಂದ ವಿದ್ಯಾರ್ಥಿಗಳಿಗೆ ದೊಡ್ಡ ಮಟ್ಟದಲ್ಲಿ ಉದ್ಯೋಗ ದೊರಕಿಸಿಕೊಡಲು ಸಹಾಯವಾಗುತ್ತಿದೆ.

ಕಾಲೇಜಿನ ಸಂಸ್ಥಾಪಕ ಅಧ್ಯಕ್ಷ ಡಾ ಎಂ.ಆರ್. ಹುಲಿನಾಯ್ಕರ್ ವಿದ್ಯಾರ್ಥಿಗಳಲ್ಲಿ ಸ್ಪರ್ಧೆಯ ಮನೋಭಾವವನ್ನು ಪ್ರೋತ್ಸಾಹಿಸಲು ಪ್ರಾಜೆಕ್ಟ್ ಎಕ್ಸಿಬಿಷನ್ ಆಯೋಜಿಸಿ ಪ್ರತಿ ತರಗತಿಯ ವಿದ್ಯಾರ್ಥಿಗಳಿಗೆ ಇಪ್ಪತ್ತೈದು ಸಾವಿರ ರೂ ನಗದು ಬಹುಮಾನ ನೀಡುತ್ತಿದ್ದಾರೆ. ಈ ಪ್ರಾಜೆಕ್ಟ್ ಎಕ್ಸಿಬಿಷನ್‌ನಲ್ಲಿ ಸುಮಾರು ನೂರಕ್ಕೂ ಹೆಚ್ಚು ಪ್ರಾಜೆಕ್ಟ್‌ಗಳನ್ನು ಕಾಲೇಜು ವಿದ್ಯಾರ್ಥಿಗಳು ಪ್ರದರ್ಶಿಸಿರುವುದು ಸಂತೋಷದ ಸಂಗತಿಯಾಗಿದೆ.

### ಐಡಿಯಾ ಲ್ಯಾಬ್

ಕಾಲೇಜಿನ ಯಾವುದೇ ವಿದ್ಯಾರ್ಥಿಗಳಿಗೆ ಹೊಸಚಿಂತನೆ ಮೂಡಿದರೆ ಅದನ್ನು ಕಾರ್ಯರೂಪಕ್ಕೆ ತರಲು ಸೂಕ್ತವೇದಿಕೆ, ವಾತಾವರಣ ಸೃಷ್ಟಿಯಾಗಬೇಕು. ಇದಕ್ಕಾಗಿ ಐಡಿಯಲ್ ಲ್ಯಾಬನ್ನು ಆರಂಭಿಸಲಾಗಿದೆ. ಇದರಿಂದ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಆತ್ಮವಿಶ್ವಾಸ, ಕೌಶಲಾಭಿವೃದ್ಧಿಯಾಗುತ್ತದೆ. ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪೇಟೆಂಟುಗಳನ್ನು ಗಳಿಸಿ ರಾಷ್ಟ್ರಕ್ಕೆ ಕೀರ್ತಿಯನ್ನು ತರಬೇಕೆಂಬ ಉದ್ದೇಶದಿಂದ ಐಡಿಯಾಥಾನ್‌ನನ್ನು ಸರ್ಕಾರ ರಾಷ್ಟ್ರಮಟ್ಟದಲ್ಲಿ ಆಯೋಜಿಸುತ್ತಿದೆ.

### ನ್ಯಾಷನಲ್ ಹ್ಯಾಕಥಾನ್

ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆ ಇಪ್ಪತ್ತೆರಡು ವರ್ಷಗಳನ್ನು ಪೂರೈಸಿದ್ದು, ಸಾಮಾಜಿಕ ಮತ್ತು ಕಾರ್ಪೊರೇಟ್ ಜವಾಬ್ದಾರಿಗಳನ್ನು ನಿರ್ವಹಿಸುತ್ತಾ ಪ್ರತಿಭಾವಂತರನ್ನು ಹೆಕ್ಕಿ ತೆಗೆಯುವ ಮತ್ತು ಅವರನ್ನು ಸಮಾಜದ ಆಸ್ತಿಯನ್ನಾಗಿ ರೂಪಿಸುವ ಕಾಯಕದಲ್ಲಿ ತೊಡಗಿದೆ.

ಶ್ರೀದೇವಿ ಇಂಜನಿಯರಿಂಗ್ ಕಾಲೇಜು ಕೃಷಿ, ಮೆಡಿಕಲ್‌ಕೇರ್ ಮತ್ತು ಪರಿಸರ ವಿಷಯಗಳನ್ನು ಮುಂದಿಟ್ಟುಕೊಂಡು, ಈ ವಲಯದ ಸಮಸ್ಯೆಗಳಿಗೆ ಪರಿಹಾರ ರೂಪಿಸಲು ರಾಷ್ಟ್ರಮಟ್ಟದ ಹ್ಯಾಕಥಾನ್ ನಡೆಸಿತು.

ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ ಕರ್ನಾಟಕ ಸೇರಿದಂತೆ ಎಂಟನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಅದರಲ್ಲಿ ಭಾಗವಹಿಸಿ ತಮ್ಮ ಪ್ರತಿಭೆ ಅನಾವರಣಗೊಳಿಸಿದ್ದಾರೆ. ಒಂದು ತಂಡದಲ್ಲಿ ಕಾಲೇಜಿನ ನಾಲ್ಕು ವಿದ್ಯಾರ್ಥಿಗಳು ತಮಗೆ ಗೊತ್ತುಪಡಿಸಿದ ವಿಷಯದ ಮೇಲೆ ಇಪತ್ತೆರಡು ಗಂಟೆಗಳಲ್ಲಿ ಹೊಸ ಅನ್ವೇಷಣೆಯನ್ನು ತೀರ್ಪುಗಾರರ ಸಮ್ಮುಖದಲ್ಲಿ ಪ್ರದರ್ಶನ ಮಾಡಿದರು.

ತಮಿಳುನಾಡಿನಿಂದ 20. ಆಂಧ್ರದಿಂದ 15, ತೆಲಂಗಾಣದಿಂದ 5, ಕರ್ನಾಟಕದಿಂದ 50 ತಂಡಗಳು ಸೇರಿದಂತೆ ಒಟ್ಟು ಎಂಟನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ರಾಷ್ಟ್ರೀಯ ಹ್ಯಾಕಥಾನ್‌ನಲ್ಲಿ ಪಾಲ್ಗೊಂಡಿದ್ದರು. ಈ ಕಾರ್ಯಕ್ರಮ ನಿರೀಕ್ಷೆಗೂ ಮೀರಿ ಯಶಸ್ವಿಯಾದದ್ದು ಕಾಲೇಜಿನ ಆಡಳಿತ ನಿರ್ವಹಣೆ ಮತ್ತು ದೂರದೃಷ್ಟಿಗೆ ಹಿಡಿದ ಕನ್ನಡಿಯಾಗಿದೆ.

### ನಿರಂತರ ಪ್ರೋತ್ಸಾಹ, ಸಹಕಾರ

ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳು ಕೈಗಾರಿಕೆಗಳ ಇಂದಿನ ಅಗತ್ಯಕ್ಕೆ ತಕ್ಕಂತೆ ಕೌಶಲವನ್ನು ರೂಡಿಸಿಕೊಳ್ಳಬೇಕು ಮತ್ತು ಯಾವುದೇ ಕಾರಣಕ್ಕೂ ಅವರು ಹೆಚ್ಚಿನ ಕೌಶಲದ ಕಲಿಕೆಯಿಂದ ವಂಚಿತರಾಗಬಾರದು ಎಂಬ ಉದ್ದೇಶದಿಂದ ಆಡಳಿತ ಮಂಡಳಿ ಒಂದು ಕೋಟಿ ರೂಪಾಯಿ ವಿನಿಯೋಗಿಸಿ ಸುಸಜ್ಜಿತ ಪ್ರಯೋಗಾಲಯಗಳನ್ನು ಸ್ಥಾಪಿಸಿದೆ. ಸಂಸ್ಥಾಪಕ ಅಧ್ಯಕ್ಷ ಡಾ. ಎಂ.ಆರ್. ಹುಲಿನಾಯ್ಕರ್, ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ, ಎಂ.ಎಸ್. ಪಾಟೀಲ್, ಕಾಲೇಜಿನ ಟ್ರಸ್ಟಿ ಅಂಬಿಕಾ ಹುಲಿನಾಯ್ಕರ್, ಪ್ರಿನ್ಸಿಪಾಲ್ ಡಾ. ನರೇಂದ್ರ ವಿಶ್ವನಾಥ್ ಅವರುಗಳ ನಿರಂತರ ಮಾರ್ಗದರ್ಶನ ಮತ್ತು ಸಂಘಟಿತ ಪ್ರಯತ್ನದಿಂದಾಗಿ ಶ್ರೀದೇವಿ ತಾಂತ್ರಿಕ ಮಹಾವಿದ್ಯಾಲಯ ರಾಜ್ಯದ ಅತ್ಯುತ್ತಮ ಇಂಜಿನಿಯರಿಂಗ್ ಕಾಲೇಜು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಹೀಗಾಗಿ ಇಲ್ಲಿ ಕಲಿತು ಹೊರ ಬರುವ ವಿದ್ಯಾರ್ಥಿಗಳ ಭವಿಷ್ಯ ಉಜ್ವಲ ಎಂಬುದರಲ್ಲಿ ಸಂದೇಹವಿಲ್ಲ. ಈ ಎಲ್ಲ ಪೂರಕ ಅಂಶಗಳಿಂದಾಗಿ ಪ್ರತಿ ವರ್ಷ ಕಾಲೇಜಿನಲ್ಲಿ ಪ್ರವೇಶದ ಪ್ರಮಾಣ ಹೆಚ್ಚಾಗುತ್ತಿದೆ ಮತ್ತು ಇಲ್ಲಿ ಉತ್ತಮ ಫಲಿತಾಂಶಗಳು ಬರುತ್ತಿವೆ. ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿರ್ವಹಣೆಯಲ್ಲೂ ಹೊಸ ಭರವಸೆ ಮೂಡಿಸಿದೆ. ಎಲ್ಲ ಸಿಬ್ಬಂದಿಗಳ ಅವಿರತ ಪ್ರಯತ್ನ ಹಾಗೂ ಬೋಧನೆ, ನಿರ್ವಹಣೆ, ಫಲಿತಾಂಶ, ಸ್ವಚ್ಛ ಪರಿಸರ ಸೇರಿದಂತೆ ಎಲ್ಲ ವಿಷಯಗಳಲ್ಲಿಯೂ ನಿಗದಿತ ಮಾನದಂಡಗಳನ್ನು ಮತ್ತು ಗುಣಮಟ್ಟವನ್ನು ಕಾಯ್ದುಕೊಂಡಿರುವುದಕ್ಕಾಗಿ ಕಾಲೇಜಿಗೆ "ನ್ಯಾಕ್ ಎ ಗ್ರೇಡ್" ಮಾನ್ಯತೆ ಲಭಿಸಿದೆ ಎಂದು ಗಿರೀಶ್ ಹೇಳುತ್ತಾರೆ.



# ವಿಶ್ವ ಆಟಿಸಂ ದಿನಾಚರಣೆ

## ಆಟಿಸಂ ಪೀಡಿತ ಮಕ್ಕಳ ಆರೋಗ್ಯ ರಕ್ಷಣೆ ಮತ್ತು ಶುಶ್ರೂಷೆ



■ ಪ್ರೊ..ಉಷಾ.ಎಸ್.
ಪ್ರಾಂಶುಪಾಲರು,
ಶ್ರೀ ರಮಣ ಮಹರ್ಷಿ ನರ್ಸಿಂಗ್ ವಿದ್ಯಾಸಂಸ್ಥೆ

ಜಗತ್ತಿನಾದ್ಯಂತ ಆಟಿಸಂ ಕುರಿತು ಸರ್ಕಾರಗಳಲ್ಲಿ ಮತ್ತು ಸಾಮಾನ್ಯ ಜನರಲ್ಲಿ ಜಾಗೃತಿಯನ್ನು ಮೂಡಿಸಲು, ಆಟಿಸಂನ ವಾಸ್ತವತೆಯನ್ನು ಒಪ್ಪಿಕೊಳ್ಳುವಂತೆ ಮಾಡಲು, ಆಟಿಸಂ ಪೀಡಿತ ಮಕ್ಕಳ ಬೆಳವಣಿಗೆಯಲ್ಲಿ ಸಹಕರಿಸಿ ಅವರಜೀವನವನ್ನು ಸುಧಾರಿಸಿ, ಇತರರಂತೆಯೇ ಅವರು ಕೂಡ ಸ್ವತಂತ್ರವಾಗಿ ಬಾಳಲು ನೆರವಾಗುವಂತೆ ಮಾಡಿ ಅವರನ್ನು ನಾಗರಿಕ ಸಮಾಜದ ಒಂದು ಅವಿಭಾಜ್ಯ ಅಂಗವನ್ನಾಗಿಸುವಂತೆ ಮಾಡಲು ಪ್ರತಿವರ್ಷದ ಏಪ್ರಿಲ್ ತಿಂಗಳಿನ 2ನೆಯ ದಿನಾಂಕದಂದು 'ವಿಶ್ವ ಆಟಿಸಂ ದಿನ'ವನ್ನು ಆಚರಿಸಲಾಗುತ್ತಿದೆ. ಈ ಸಮಸ್ಯೆಯು ಆಟಿಸಂ ಪೀಡಿತ ಮಕ್ಕಳ ಜೀವನವನ್ನು ವಿವಿಧ ರೀತಿಯಲ್ಲಿ ಕಾಡುತ್ತದೆ. ಈ ಕಾರಣದಿಂದಾಗಿಯೇ ಇಂಗ್ಲಿಷ್ ಭಾಷೆಯಲ್ಲಿ ಇದನ್ನು Autism Spectrum Disorder (ASD) ಎಂದು ಕರೆಯಲಾಗುತ್ತದೆ. ನವಜಾತ ಶಿಶುಗಳು ಮತ್ತು ಸಾಮಾನ್ಯವಾಗಿ ಎಂಟು ವರ್ಷದೊಳಗಿನ ಇತರ ಮಕ್ಕಳಲ್ಲಿ ಮಿದುಳಿನ ಬೆಳವಣಿಗೆಯು ಕೆಲವು ಕಾರಣಗಳಿಂದಾಗಿ ಕುಂಠಿತವಾದರೆ ಈ ಸಮಸ್ಯೆಯು ಕಾಣಿಸಿಕೊಳ್ಳುತ್ತದೆ. ಆಟಿಸಂಪೀಡಿತರು ಸಾಮಾಜೀಕರಣಗೊಳ್ಳುವ ಪ್ರಕ್ರಿಯೆಗೆ ಇದು ಬಹಳ ಕಠಿಣವಾದ ಒಂದು ಅಡಚಣೆಯನ್ನು ಉಂಟು ಮಾಡುತ್ತದೆ. ಇದರಿಂದ ಆ ಮಕ್ಕಳು ಸಮಾಜದಲ್ಲಿ ಇತರ ಮಕ್ಕಳೊಡನೆ ಸಹಜವಾಗಿ ಬೆರೆಯುವುದು ಅಸಾಧ್ಯವಾಗುತ್ತದೆ. ಇದನ್ನು ಸಮಾಜವು, ಸರ್ಕಾರಗಳು ಮತ್ತು ಆರೋಗ್ಯಸೇವೆಯನ್ನು ಒದಗಿಸುತ್ತಿರುವ ಸಂಸ್ಥೆಗಳು ಗಂಭೀರವಾಗಿ ತೆಗೆದುಕೊಳ್ಳುವಂತೆ ಮಾಡುವುದು ಈ ದಿನಾಚರಣೆಯ ಮುಖ್ಯ ಉದ್ದೇಶವಾಗಿದೆ.

ಆಟಿಸಂ ವಿಷಯದಲ್ಲಿ 'ವಾಸ್ತವತೆಯನ್ನು ಸ್ವೀಕರಿಸಿ, ಅದನ್ನು ನಿವಾರಿಸುವುದರಲ್ಲಿ ನಿಶ್ಚಿತ ಪ್ರಗತಿಯನ್ನು ಸಾಧಿಸುವಲ್ಲಿ ನೈರಂತರ್ಯವನ್ನು ಸಾಧಿಸಬೇಕು' ಎಂಬುದು ಈ ವರ್ಷದ ದಿನಾಚರಣೆಯ ಧ್ಯೇಯವಾಕ್ಯವಾಗಿದೆ. ಇದು ಪ್ರಪಂಚದಾದ್ಯಂತ ಇರುವ ಆಟಿಸಂಪೀಡಿತ ಮಕ್ಕಳ ಆರೈಕೆಯ ವಿಷಯದಲ್ಲಿ ನಿರಂತರವಾದ ಪ್ರಗತಿಯನ್ನು ಸಾಧಿಸುವ ಹಾಗೂ ಧನಾತ್ಮಕವಾದ ಬದಲಾವಣೆಗಳನ್ನು ಮಾಡಲು ಪ್ರಯತ್ನಿಸುವ ನಿಟ್ಟಿನಲ್ಲಿ ನೆರವಾಗುತ್ತವೆ ಹಾಗೂ ಸರ್ಕಾರದ ನೀತಿಗಳನ್ನು ರೂಪಿಸಲು ಸಹಾಯ ಮಾಡುತ್ತದೆ ಎಂದು ಭಾವಿಸಲಾಗಿದೆ.

### ಆಟಿಸಂ ಬಗೆಗಿನ ಅರಿವು

ಆಟಿಸಂ ಒಬ್ಬ ವ್ಯಕ್ತಿಯ ಆಲೋಚನಾಶಕ್ತಿ, ಭಾವನೆ, ಇತರರೊಡನೆ ಭಾವನೆಗಳನ್ನು ಹಂಚಿಕೊಳ್ಳುವ ಸಾಮರ್ಥ್ಯ ಮತ್ತು ಅವರೊಡನೆ ಅನ್ಯೋನ್ಯವಾಗಿ ಬಾಳುವ ಸಹಜ ಶಕ್ತಿಯನ್ನು ಕುಂದಿಸುತ್ತದೆ. ಆಟಿಸಂ ಪೀಡಿತ ಮಕ್ಕಳಲ್ಲಿ ಹಲವರು ತಮ್ಮ ಜೀವಮಾನ ಸಂಪೂರ್ಣವಾಗಿ ಪರಾವಲಂಬಿಗಳಾಗಿಯೇ ಬದುಕನ್ನು ಸಾಗಿಸಬೇಕಾಗುತ್ತದೆ, ಆದರೆ ಕೆಲವರು ಬಹುಮಟ್ಟಿಗೆ ತಮ್ಮ ಕಾಲ ಮೇಲೆ ನಿಂತುಕೊಂಡು ತಾವೇ ಸ್ವತಂತ್ರವಾಗಿ ಬದುಕುವ ಸಾಮರ್ಥ್ಯವನ್ನು ಪಡೆದುಕೊಳ್ಳುತ್ತಾರೆ.

### ಆಟಿಸಂ ಎಂದರೇನು?

ಆಟಿಸಂ ನರಗಳ ಸಮಸ್ಯೆಯಿಂದಾಗಿ ಮಿದುಳಿನ ಬೆಳವಣಿಗೆಯಲ್ಲಿ ಉಂಟಾಗುವ ತೊಂದರೆ. ಅಂದರೆ, ಈ ಸಮಸ್ಯೆಯ ಬೀಜವು ಮಕ್ಕಳ ಜನನ–ಪೂರ್ವದಲ್ಲಿ ಅಥವಾ ಜನನದ ಅನಂತರದ ಮೊದಲ ಮೂರು ವರ್ಷಗಳಲ್ಲಿ ಕಾಣಿಸಿಕೊಳ್ಳುತ್ತದೆ. ಇದು ಒಬ್ಬರಿಂದ ಮತ್ತೊಬ್ಬರಿಗೆ ಹರಡುವ ಅಂಟುರೋಗವಲ್ಲ ಅಥವಾ ಮಕ್ಕಳ ಬಗೆಗೆ ಇರಬಹುದಾದ ತಂದೆ ತಾಯಿಗಳ ನಿರ್ಲಕ್ಷ್ಯದಿಂದ ಕಾಣಿಸಿಕೊಳ್ಳುವ ತೊಂದರೆಯೂ ಅಲ್ಲ. ಇದು ಜೀವಮಾನ ಪೂರ್ತಿ ಅಂಟಿಕೊಂಡೇ ಇರುತ್ತದೆ. ಆದರೆ, ಅವರ ಮನೆಯವರಿಂದ, ಆರೋಗ್ಯಸೇವೆಯನ್ನು ನೀಡುವವರಿಂದ ಹಾಗೂ ಇದಕ್ಕಾಗಿಯೇ ಇರುವ ವಿಶೇಷ ರೀತಿಯ ಶಾಲೆಗಳವರಿಂದ ಸೂಕ್ತವಾದ ಶುಷ್ರೂಷೆ, ಬೆಂಬಲ, ಸಹಕಾರಗಳು ದೊರೆತರೆ, ಆ ಮಕ್ಕಳು ಕೂಡ ಸಾಮಾನ್ಯ ಮಕ್ಕಳ ರೀತಿಯಲ್ಲಿಯೇ ಉತ್ತಮವಾದ ಜೀವನವನ್ನು ಸಾಗಿಸಬಹುದಾಗಿದೆ.

### ಆಟಿಸಂಗೆ ಕಾರಣಗಳು

ಆಟಿಸಂಗೆ ಇಂತಹುದೇ ನಿರ್ದಿಷ್ಟ ಕಾರಣವೆಂಬುದು ಇಲ್ಲಿಯವರೆಗೂ ಕಂಡುಬಂದಿಲ್ಲ. ಆದರೂ, ವಿಜ್ಞಾನಿಗಳು ಅದರ ಬಗೆಗೆ ತಮ್ಮ ಸಂಶೋಧನೆಗಳನ್ನು ಮುಂದುವರಿಸಿದ್ದಾರೆ. ಇಲ್ಲಿಯವರೆಗಿನ ಅವರ ಅಭಿಪ್ರಾಯದಂತೆ, ವಂಶವಾಹಿಗಳು ಇದಕ್ಕೆ ಪ್ರಮುಖ ಕಾರಣವಿರಬಹುದು. ಒಂದು ಕುಟುಂಬದಲ್ಲಿ ಒಬ್ಬರಿಗೆ ಆಟಿಸಂನ ಸಮಸ್ಯೆಯಿದ್ದರೆ, ಮುಂದೆ ಬರುವ ಅವರ ವಂಶದವರಲ್ಲಿಯೂ ಇದು ಮುಂದುವರಿಯುವ ಸಾಧ್ಯತೆ ಇರುತ್ತದೆ. ಇತರ ಸಂಭವನೀಯ ಕಾರಣಗಳು ಹೀಗಿರಬಹುದು:

- ವಂಶವಾಹಿಗಳ ಲಕ್ಷಣದಲ್ಲಿ ಉಂಟಾಗಿರಬಹುದಾದ ಬದಲಾವಣೆಗಳು,
- ಹೆರಿಗೆಯ ಸಂದರ್ಭಗಳಲ್ಲಿ ಆಮ್ಲಜನಕದ ಕೊರತೆ ಅಥವಾ ಆ ಮಹಿಳೆಯರಿಗೆ ತಗುಲಿರಬಹುದಾದ ಸೋಂಕುಗಳು,
- ನಿರ್ದಿಷ್ಟ ವಯಸ್ಸಾದ ಅನಂತರ ಗರ್ಭವನ್ನು ಧರಿಸುವುದು,
- ಯಾವೊಂದನ್ನೂ ನಿಶ್ಚಯಪೂರ್ವಕವಾಗಿ ಇದೇ ಎಂದು ಹೇಳಲಾಗದ ಪರಿಸರ ಸಂಬಂಧಿ ಕಾರಣಗಳು.

ಇವು ಸಂಭವನೀಯ ಕಾರಣಗಳಷ್ಟೇ ಆಗಿದ್ದು, ಈ ವಿಷಯದಲ್ಲಿ ಸಂಶೋಧನೆಗಳು ಮುಂದುವರಿಯ ಬೇಕಾದ ಅಗತ್ಯವಿದೆ.

### ಆಧಾರರಹಿತ ಮಿಥ್ಯಾಗಳು

ಜನತೆಯಲ್ಲಿ ಆಟಿಸಂ ಕುರಿತು ಒಂದು ಮಿಥ್ಯೆಯಿದೆ. ಕೆಲವು ಲಸಿಕೆಗಳ ಚುಚ್ಚುಮದ್ದನ್ನು ತೆಗೆದುಕೊಂಡರೆ ಈ ಸಮಸ್ಯೆಯು ಬರುತ್ತದೆ ಎಂದು ಜನರು ನಂಬುತ್ತಾರೆ. ಆದರೆ, ವೈಜ್ಞಾನಿಕ ಅಧ್ಯಯನಗಳು ಇದನ್ನು ತಪ್ಪು ಎಂದು ತೋರಿಸಿಕೊಟ್ಟಿವೆ.

**ಆಟಿಸಂ ಪೀಡಿತ ಮಕ್ಕಳು ಅಥವಾ ವಯಸ್ಕರಲ್ಲಿ ಈ ಲಕ್ಷಣಗಳು/ದೌರ್ಬಲ್ಯಗಳು ಕಂಡುಬರುತ್ತವೆ:**

- ಅವರಿಗೆ ತಮ್ಮ ಮಾತು ಅಥವಾ ಭಾವನೆಗಳನ್ನು ವ್ಯಕ್ತಪಡಿಸುವ ಮತ್ತು ಸಮಾಜದಲ್ಲಿ ಹೊಂದಿ ಕೊಳ್ಳುವ ಸಾಮರ್ಥ್ಯದ ಕೊರತೆ ಯಿರುತ್ತದೆ.
- ಮಾತುಗಳನ್ನು ಕಲಿಯುವುದು ನಿಧಾನವಾಗಿರುತ್ತದೆ ಅಥವಾ ಕಲಿಯುವುದೇ ಇಲ್ಲ.
- ಕೆಲವೊಂದು ಪದಗಳನ್ನು ಅಥವಾ ಪದಗುಚ್ಛಗಳನ್ನು ಮತ್ತೆ ಮತ್ತೆ ಉಚ್ಚರಿಸುತ್ತಿರುತ್ತಾರೆ.
- ಸಂಜ್ಞೆಗಳ ಮೂಲಕ ತಿಳಿಸುವುದು ಅವರಿಗೆ ಸಾಮಾನ್ಯವಾಗಿ ಸಾಧ್ಯವಾಗುವುದಿಲ್ಲ ಅಥವಾ ಹಾಗೆ ಮಾಡಲು ಅವರು ಬಹಳ ಕಷ್ಟಪಡುತ್ತಾರೆ.
- ದೈಹಿಕ ಸ್ಥಿರತೆಯಿಲ್ಲದೆ ಅವರು ತೂಗಾಡುತ್ತಿರುತ್ತಾರೆ ಅಥವಾ ಸುತ್ತುತ್ತಿರುತ್ತಾರೆ.
- ತಮ್ಮೊಂದಿಗೆ ಮಾತನಾಡುತ್ತಿರುವವರ ಕಣ್ಣಲ್ಲಿ ಕಣ್ಣಿಟ್ಟು ನೋಡುವುದಿಲ್ಲ.
- ತಮ್ಮೊಂದಿಗೆ ಮಾತನಾಡುತ್ತಿರುವವರ ಮುಖದಲ್ಲಿ ಕಾಣುವ ಭಾವನೆಗಳಿಗೆ, ನಗುವಿಗೆ ಪ್ರತಿಕ್ರಿಯೆನ್ನು ತೋರುವುದಿಲ್ಲ.
- ಅವರ ವರ್ತನೆಗಳಿಗೆ ಅಥವಾ ನಿಗದಿತ ದೈನಂದಿನ ಚಟುವಟಿಕೆಗಳಿಗೆ ಬಲವಾಗಿ ಅಂಟು ಕೊಂಡಿರುತ್ತಾರೆ.



- ಕೆಲವೊಂದು ವಿಷಯಗಳಿಗೆ, ಅಂದರೆ ಶಬ್ದಗಳು, ಬೆಳಕು ಮೊದಲಾದವುಗಳ ವಿಷಯಗಳಿಗೆ ಅವರ ಸ್ಪಂದನೆಯಲ್ಲಿ ಏಕರೂಪತೆ ಇರುವುದಿಲ್ಲ. ಕೆಲವು ವೇಳೆ ಅಂತಹವುಗಳ ಬಗೆಗೆ ಅವರು ಬಹಳ ತೀವ್ರವಾಗಿ ಸ್ಪಂದಿಸುತ್ತಾರೆ ಅಥವಾ ಯಾವುದೇ ಪ್ರತಿಕ್ರಿಯೆಯನ್ನೂ ತೋರುವುದಿಲ್ಲ.
- ಕೆಲವು ವಿಷಯಗಳಲ್ಲಿ ತೀವ್ರವಾದ ಆಸಕ್ತಿಯನ್ನು ಹೊಂದಿರುತ್ತಾರೆ.
- ಭಾವನಾತ್ಮಕ ಸಂಬಂಧಗಳು ಅವರಲ್ಲಿ ಅಷ್ಟಾಗಿ ಕಾಣಿಸುವುದಿಲ್ಲ ಅಥವಾ ಅವುಗಳ ಬಗೆಗೆ ಅನಾಸಕ್ತಿಯನ್ನು ಹೊಂದಿರುತ್ತಾರೆ.
- ಆಟವಾಡಲು ಒದಗಿಸಿದ ಬೊಂಬೆಗಳೊಡನೆ ಆಡುವುದರ ಬದಲಿಗೆ ಅವುಗಳನ್ನು ಸಾಲಾಗಿ ಇಡುತ್ತಿರುತ್ತಾರೆ.
- ತಮ್ಮ ಹೆಸರನ್ನು ಹಿಡಿದು ಕೂಗಿದರೂ ಅದಕ್ಕೆ ಅವರು ಪ್ರತಿಕ್ರಿಯಿಸುವುದಿಲ್ಲ.
- ಕೆಲವು ಮಕ್ಕಳಿಗೆ ಅಪಸ್ಮಾರದ ಸಮಸ್ಯೆಯೂ ಇರುತ್ತದೆ.
- ಬಹುತೇಕ ಮಕ್ಕಳಿಗೆ ನಿದ್ರಾಭಂಗವು ಸಾಮಾನ್ಯವಾಗಿರುತ್ತದೆ ಹಾಗಾಗಿ ಅವರು ಸರಿಯಾಗಿ ನಿದ್ರಿಸುವುದಿಲ್ಲ.

**ಕೆಲವು ಆಟಿಸಂ ಪೀಡಿತ ಮಕ್ಕಳು ಮತ್ತು ವಯಸ್ಕರಲ್ಲಿ ಈ ಮುಂದಿನ ಲಕ್ಷಣಗಳೂ ಇರುತ್ತವೆ:**

- ಇತರರೊಡನೆ ಸ್ನೇಹವನ್ನು ಬೆಳಸುವುದರಲ್ಲಿ ಆಸಕ್ತಿಯಿರುವುದಿಲ್ಲ ಅಥವಾ ಅದು ಅವರಿಗೆ ಸಾಧ್ಯವಾಗುವುದಿಲ್ಲ.
- ತಮ್ಮ ನಿಗದಿತ ದೈನಂದಿನ ಚಟುವಟಿಕೆಗಳಲ್ಲಿ ಸ್ವಲ್ಪ ಏರುಪೇರಾದರೂ ಅವರು ಕೆರಳುತ್ತಾರೆ.

### ಸಮಾಜದಲ್ಲಿ ಆಟಿಸಂ ಪೀಡಿತರಅಂದಾಜು ಪ್ರಮಾಣ



ವಿಶ್ವ ಮಟ್ಟದಲ್ಲಿ ಆಟಿಸಮ್ಮಿನಿಂದ ಪೀಡಿತರಾಗಿರುವ ಮಕ್ಕಳ ಸಂಖ್ಯೆಯ ಅನುಪಾತವು ಒಟ್ಟು ಮಕ್ಕಳ ಸಂಖ್ಯೆಗೆ ಸುಮಾರಾಗಿ 1:31 ಇದೆಯೆಂಬ ಅಂದಾಜಿದೆ. ಅಂದರೆ, 8 ವರ್ಷದ ಒಳಗಿನ ಮಕ್ಕಳಲ್ಲಿ ಇವರ ಸಂಖ್ಯೆ ಹತ್ತಿರ ಹತ್ತಿರ ಶೇ. 3.2ರಷ್ಟು ಇದೆ. 2020ರಲ್ಲಿ ನಡೆಸಲ್ಪಟ್ಟ ಒಂದು ಅಧ್ಯಯನದ ಪ್ರಕಾರ 36 ಮಕ್ಕಳಲ್ಲಿ ಒಂದು ಮಗುವು(ಅಂದರೆ, ಶೇ. 2.8) ಆಟಿಸಮ್ಮಿನಿಂದ ಪೀಡಿತವಾಗಿರುತ್ತದೆ. ಬಾಲಕರು ಮತ್ತು ಬಾಲಕಿಯರ ನಡುವಿನ ಪ್ರಮಾಣವನ್ನು ನೋಡಿದರೆ, ಬಾಲಕರಲ್ಲಿನ ಈ ಸಮಸ್ಯೆಯ ಪ್ರಮಾಣವು ಬಾಲಕಿಯರ ಪ್ರಮಾಣಕ್ಕಿಂತ ಮೂರರಷ್ಟಿತ್ತು.

ಅನಧಿಕೃತವಾಗಿ ದೊರೆಯುವ ಅಂಕಿಅಂಶಗಳ ಪ್ರಕಾರ ಭಾರತದಲ್ಲಿ ಮಕ್ಕಳಲ್ಲಿ ಈ ಪ್ರಮಾಣವು ಸುಮಾರು ಶೇ. 3ರಷ್ಟಿತ್ತು. ಆದರೆ, ಈ ನಿಟ್ಟಿನಲ್ಲಿ ಅಧಿಕೃತವಾದ ಅಂಕಿಅಂಶಗಳು ಇಲ್ಲಿಯವರೆಗೂ ಲಭ್ಯವಾಗಿಲ್ಲ.

### ರೋಗ ವಿಧಾನ

ಆಟಿಸಮ್ಮನ್ನು ಪೂರ್ವಭಾವಿಯಾಗಿ ಪತ್ತೆ ಹಚ್ಚಲು ಯಾವುದೇ ನಿರ್ದಿಷ್ಟ ವಿಧಾನಗಳಿಲ್ಲ. ಇದನ್ನು ಸಾಮಾನ್ಯವಾಗಿ ತಂದೆ, ತಾಯಿಗಳು ಅಥವಾ ಉಪಾಧ್ಯಾಯರು ಮಗುವಿನ ಅಸಾಮಾನ್ಯ ಅಥವಾ ಅಸಮರ್ಪಕ ವರ್ತನೆಗಳಿಂದ ಗುರುತು ಹಚ್ಚುತ್ತಾರೆ. ಅಂದರೆ ಆಟಿಸಮ್ಮನ್ನು ಪತ್ತೆ ಹಚ್ಚುವ ಮೊದಲ ಪ್ರಯತ್ನ ಈ ಮಕ್ಕಳಲ್ಲಿ ಕಂಡುಬರುವ ವರ್ತನೆಯಲ್ಲಿನ ವೈಚಿತ್ರ್ಯಗಳಿಂದ ಮಾತ್ರ ಸಾಧ್ಯ. ಮುಂದಿನ ಹಂತದಲ್ಲಿ ಈ ಸಮಸ್ಯೆಯು ಬೆಳೆಯುವಲ್ಲಿನ ವಿವಿಧ ಹಂತಗಳನ್ನು ಗುರುತಿಸುವುದು ಅಗತ್ಯ. ಅನಂತರ, ಅಂತಹ ಮಕ್ಕಳನ್ನು ಸ್ಕ್ರೀನಿಂಗಿಗೆ ಒಳಪಡಿಸಿ, ನುರಿತ ವೈದ್ಯರಿಂದ ಪರಿಶೀಲಿಸಿಕೊಳ್ಳಬೇಕು. ಮುಂದಿನ ಹಂತದಲ್ಲಿ, ಮಗುವಿನಲ್ಲಿ ಉಂಟಾಗಿರುವ ಆಟಿಸಮ್ಮಿನ ಸಮಸ್ಯೆಯ ಪರಿಶೀಲನೆಯನ್ನು ವೃತ್ತಿನಿರತ ವೈದ್ಯರು, ಮನೋವೈದ್ಯರು, ಹಾಗೂ ಮಕ್ಕಳ ವೈದ್ಯರು, ಮೊದಲಾದವರು ಇರುವ ತಂಡದಿಂದ ಮಾಡಿಸಬೇಕು. ಸ್ಕ್ರೀನಿಂಗ್ ಮತ್ತು ಪ್ರಾಥಮಿಕ ಬೆಳವಣಿಗೆಗಳ ವರದಿಯನ್ನು ಗಮನಿಸಿ ವಿವಿಧ ಹಂತಗಳಲ್ಲಿ ಮಗುವಿನಲ್ಲಿ ಉಂಟಾದ ಬೆಳವಣಿಗೆಗಳನ್ನು ಅಥವಾ ಸಮಸ್ಯೆಯ ವಿವಿಧ ಆಯಾಮಗಳನ್ನು ಈ ತಂಡವು ವಿಶ್ಲೇಷಿಸುತ್ತದೆ.

ಈ ಪ್ರಕ್ರಿಯೆಗಳನ್ನು ವಿಳಂಬ ಮಾಡದೆ ಎಷ್ಟು ಶೀಘ್ರವಾಗಿ ಮಾಡಿಸಿದರೆ, ಮಗುವಿನ ಮುಂದಿನ ಜೀವನದ ದೃಷ್ಟಿಯಿಂದ ಅಷ್ಟೂ ಒಳ್ಳೆಯದು ಮತ್ತು ಸಮಸ್ಯೆಗಳನ್ನು ಆದಷ್ಟು ಬೇಗ ಪರಿಹರಿಸಬಹುದು.

### ಚಿಕಿತ್ಸೆ ಮತ್ತು ಪರಿಹಾರಗಳು

ಆಟಿಸಮ್ಮಿಗೆ ನಿರ್ದಿಷ್ಟ ಚಿಕಿತ್ಸೆಗಳಿಲ್ಲ. ವಿವಿಧ ಥೆರಪಿಗಳ ಮೂಲಕ ಚಿಕಿತ್ಸೆ ಕೊಡಲಾಗುತ್ತದೆ. ಹಲವು ವಿಧಾನಗಳನ್ನು ಅನುಸರಿಸಿ ಅಂತಹ ಮಕ್ಕಳಲ್ಲಿ ಇರುವ ಸಂವಹನದ ಕೊರತೆಯನ್ನು ಹಾಗೂ ವರ್ತನೆಯಲ್ಲಿರುವ ಅಸಮರ್ಪಕತೆಯನ್ನು ಸುಧಾರಿಸಲು ಮತ್ತು ಕನಿಷ್ಠ ಮಟ್ಟಿಗೆ ಅಗತ್ಯವಾದ ಕೌಶಲಗಳನ್ನು ಕಲಿಸಲು ಪ್ರಯತ್ನಿಸಬಹುದು. ಇದಕ್ಕೆ ಮಕ್ಕಳ ವೈಯಕ್ತಿಕ ಅಗತ್ಯವನ್ನು ಆಧರಿಸಿ ಈ ಮುಂದೆ ಹೇಳಿರುವ ಎಲ್ಲ ಅಥವಾ ಕೆಲವು ಚಿಕಿತ್ಸೆಗಳನ್ನು / ಚಟುವಟಿಕೆಗಳನ್ನು ಬಳಸಬೇಕು.

#### 1. ವರ್ತನಾಚಿಕಿತ್ಸೆ

- ಆನ್ವಯಿಕ ವರ್ತನಾ ವಿಶ್ಲೇಷಣೆ (Applied Behavior Analysis). ಬಹಳಷ್ಟು ಪ್ರಕರಣಗಳಲ್ಲಿ ಇದನ್ನು ಬಳಸುತ್ತಾರೆ.
- ಇದರಿಂದ ಅನಗತ್ಯವಾದ ಅತಿರೇಕದ ವರ್ತನೆಗಳನ್ನು ಬಿಡಿಸಬಹುದು ಮತ್ತು ಮಕ್ಕಳಿಗೆ ಉಪಯುಕ್ತವಾಗಿ ಕಂಡುಬರುವ ಕೌಶಲಗಳನ್ನು ಹೇಳಿ ಕೊಡಬಹುದು.
- ಇದರಲ್ಲಿ ಕಲಿಸಿದ ಅಭ್ಯಾಸಗಳ ಪುನರಾವರ್ತನೆಗೆ ಗಮನವೀಯಲಾಗುತ್ತದೆ ಮತ್ತು ಮಕ್ಕಳು ಅದನ್ನು ಮತ್ತೆ ಮತ್ತೆ ಮಾಡಿದಾಗ ಪ್ರೋತ್ಸಾಹದ ನುಡಿಗಳನ್ನಾಡಬೇಕು.
- ವರ್ತನಾಚಿಕಿತ್ಸೆಗೆ ಅಚ್ಚುಕಟ್ಟಾದ ವ್ಯವಸ್ಥೆಯ ಅಗತ್ಯವಿರಬೇಕು. ಇದರಲ್ಲಿ ಮಕ್ಕಳನ್ನು ಉದ್ರೇಕಕ್ಕೆ ಈಡು ಮಾಡದಂತಹ ಮಾರ್ಗಗಳನ್ನು ಅನುಸರಿಸಬೇಕು.



**2. ವಾಕ್ಚಿಕಿತ್ಸೆ**

- ಸಂವಹನವನ್ನು ಸುಗಮಗೊಳಿಸಲು ಬಳಸುವ ಈ ವಾಕ್ಚಿಕಿತ್ಸೆಯಲ್ಲಿ ಸರಳವಾದ ಭಾಷೆಯನ್ನು ಹಾಗೂ ಅಂಗಗಳ ಸಂಜ್ಞೆಗಳನ್ನು, ಕಣ್ಣಲ್ಲಿಕಣ್ಣಿಟ್ಟು ತಮ್ಮ ಭಾವನೆಗಳನ್ನು ಚಿಕಿತ್ಸಕರು ಮಗುವಿಗೆ ತಲುಪಿಸುತ್ತಾರೆ, ಇದಕ್ಕೆ ನುರಿತ ವೃತ್ತಿನಿರತರ ಅಗತ್ಯವಿರುತ್ತದೆ. ಇದರಿಂದ ಮಗುವಿನ ವಾಕ್ಶಕ್ತಿ ಹಾಗೂ ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಹೆಚ್ಚುತ್ತದೆ.

**3. ವೃತ್ತಿ ಮತ್ತು ವರ್ತನೆ–ಆಧಾರಿತ ಚಿಕಿತ್ಸೆ**

- ಈ ಚಿಕಿತ್ಸೆಯಲ್ಲಿ ಮಗುವಿಗೆ ಬಟ್ಟೆಯನ್ನು ಸರಿಯಾಗಿ ಹಾಕಿಕೊಳ್ಳುವುದನ್ನು, ಬರೆಯುವುದನ್ನು ಮತ್ತು ವಸ್ತುಗಳನ್ನು ಬಳಸುವ ಅಭ್ಯಾಸವನ್ನು ಮಾಡಿಸಲಾಗುತ್ತದೆ.
- ಮಕ್ಕಳಿಗೆ ಸ್ನಾಯುಗಳ ಚಲನೆಗೆ ಸಂಬಂಧಿಸಿದ ಕೌಶಲಗಳನ್ನು ಕಲಿಸಲಾಗುತ್ತದೆ ಮತ್ತು ಅವರಿಗೆ ಸ್ವತಂತ್ರವಾಗಿ ಸಣ್ಣಪುಟ್ಟ ಕೆಲಸಗಳನ್ನು ನಿರ್ವಹಿಸುವ ಅಭ್ಯಾಸವನ್ನು ಮಾಡಿಸಲಾಗುತ್ತದೆ.
- ಈ ಚಿಕಿತ್ಸೆಯಲ್ಲಿ ಮೊದಲ ಹಂತಗಳಲ್ಲಿ ಮಕ್ಕಳು ಸಣ್ಣ ಮತ್ತು ಸುಲಭವಾದ ಕೆಲಸಗಳಲ್ಲಿ ತೊಡಗಿಕೊಳ್ಳುವಂತೆ ಮಾಡಲಾಗುತ್ತದೆ. ಮಕ್ಕಳ ವೈಯಕ್ತಿಕ ಗ್ರಹಣಶಕ್ತಿಯಲ್ಲಿ ಆಗುತ್ತಿರುವ ಬೆಳವಣಿಗೆಯನ್ನು ಗಮನಿಸಿ, ಕ್ರಮಕ್ರಮವಾಗಿ ಆದರೆ, ನಿಧಾನವಾಗಿ ಕೆಲಸಗಳ ಗಂಭೀರತೆಯನ್ನು ಹೆಚ್ಚಿಸಿಕೊಂಡು ಹೋಗಲಾಗುತ್ತದೆ. ದೀರ್ಘವಾದ ಅವಧಿಯಲ್ಲಿ ಈ ಮಕ್ಕಳು ಸಮಾಜದ ಇತರ ಮಕ್ಕಳೊಡನೆ ಸಾಮಾನ್ಯ ರೀತಿಯಲ್ಲಿ ಬೆರೆಯಲು ಇದು ಸಹಾಯವನ್ನು ಮಾಡುತ್ತದೆ.

**4. ಸಮಗ್ರ ಸಂವೇದನಾ ಚಿಕಿತ್ಸೆ**

- ಸ್ಪರ್ಶ, ಶಬ್ದ ಅಥವಾ ಬೆಳಕಿನ ವಿಷಯದಲ್ಲಿ ಸೂಕ್ಷ್ಮ ಸಂವೇದನೆಗಳನ್ನು ಉಳ್ಳ ಮಕ್ಕಳ ವಿಷಯದಲ್ಲಿ ಈ ಚಿಕಿತ್ಸೆಯನ್ನು ನೀಡುತ್ತಾರೆ.
- ಸಂವೇದನೆಗಳಿಗೆ ಸೂಕ್ತವಾಗಿ ಪ್ರತಿಕ್ರಿಯೆಯನ್ನು ನೀಡುವಂತೆ ಮಕ್ಕಳನ್ನು ಇದರಿಂದ ಪ್ರೇರಿಸಬಹುದು

**5. ಸಾಮಾಜಿಕ ಕೌಶಲಗಳ ತರಬೇತಿ**

- ಇದರಲ್ಲಿ ಸಮಾಜದಲ್ಲಿ ಇತರರೊಡನೆ ಬೆರೆಯಲು ಮತ್ತು ಅವರೊಡನೆ ಸಂವಹನ ಕ್ರಿಯೆ ನಡೆಸಲು ತರಬೇತಿಯನ್ನು ನೀಡಲಾಗುತ್ತದೆ.
- ಗುಂಪುಗಳಲ್ಲಿ ಒಟ್ಟಾಗಿ ಕೆಲಸ ಮಾಡುವ ವಿಧಾನಗಳನ್ನು ಮತ್ತು ಹಾಗೆ ಮಾಡುವಾಗ ಮಕ್ಕಳು ಅನುಸರಿಸಬೇಕಾದ ವರ್ತನೆಯ ನಿಯಮಗಳನ್ನು ಕೂಡ ಕಲಿಸಲಾಗುತ್ತದೆ.

**6. ವಿಶೇಷ ಶಿಕ್ಷಣ**

- ಈ ವಿಧಾನದಲ್ಲಿ ಪ್ರತಿಯೊಂದು ಮಗುವಿಗೂ ಅದರ ವೈಯಕ್ತಿಕ ಅಭಿರುಚಿ, ಸಾಮರ್ಥ್ಯಗಳನ್ನು ಅನುಸರಿಸಿ ಶಾಲೆಯಲ್ಲಿ ಯೋಜನೆಗಳನ್ನು ತಯಾರಿಸಲಾಗುತ್ತದೆ.
- ಇದರಿಂದ ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಪ್ರತಿ ಮಗುವಿಗೂ ಕಲಿಕೆಯ ಅವಕಾಶಗಳು ದೊರೆಯುತ್ತವೆ.

**7. ಔಷಧೋಪಚಾರ**

- ಆಟಿಸಂ ಪೀಡಿತ ಮಕ್ಕಳ ಮನಸ್ಸಿನಲ್ಲಿ ಸಹಜವಾಗಿ ಇರುವ ಆತಂಕಗಳನ್ನು ಮತ್ತು ಅವರ ನಿದ್ರಾ ವೈಫಲ್ಯವನ್ನು ಸರಿಪಡಿಸಿ ಅವರಿಗೆ ನೆಮ್ಮದಿಯನ್ನು ಉಂಟುಮಾಡಲು ಔಷಧೋಪಚಾರಗಳು ಅಗತ್ಯವಾಗಿರುತ್ತವೆ.

ವರ್ತನಾಚಿಕಿತ್ಸೆ ಹಾಗೂ ವಿವಿಧ ರೀತಿಯ ಜೊತೆಗೆ ಔಷಧಗಳನ್ನೂ ಸೂಕ್ತವಾಗಿ ಬಳಸಬೇಕಾಗುತ್ತದೆ. ಇದಕ್ಕೆ ಬೇಕಾದ ತರಬೇತಿಯನ್ನು ಪೋಷಕರಿಗೂ ಮತ್ತು ಆರೋಗ್ಯ ಸೇವೆಯನ್ನು ಮಾಡುವ ದಾದಿಯರಿಗೂ ನೀಡಬೇಕು. ಇವುಗಳೆಲ್ಲದರ ಪರಿಣಾಮವಾಗಿ ಮಕ್ಕಳ ಮನಸ್ಸು ಕಲಿಯುವ ವಿಷಯಗಳ ಮೇಲೆ ಏಕಾಗ್ರವಾಗುತ್ತದೆ ಮತ್ತು ಅವರಲ್ಲಿರುವ ಚಟುವಟಿಕೆಗಳಲ್ಲಿನ ಉನ್ಮಾದದ ತೀವ್ರತೆ ಸಾಕಷ್ಟು ಕಡಮೆಯಾಗುತ್ತದೆ.

**8. ಭಾವನಾತ್ಮಕ ಚಿಕಿತ್ಸೆ**

- ಭಾವನಾತ್ಮಕ ನೆರವನ್ನು ನೀಡುವಂತಹ ಚಿಕಿತ್ಸೆಯಲ್ಲಿ ಸಾಮಾಜಿಕವಾಗಿ ಈ ಮಕ್ಕಳು ಇತರ ಮಕ್ಕಳೊಡನೆ ಕಲೆತು ಆಟಪಾಟಗಳನ್ನು ಸಾಮಾನ್ಯ ರೀತಿಯಲ್ಲಿ ಕಲಿಯುವ ವಾತಾವರಣವನ್ನು ಒದಗಿಸಲಾಗುತ್ತದೆ. ಇತರ ಮಕ್ಕಳೊಡನೆ ಕಣ್ಣಲ್ಲಿಕಣ್ಣಿಟ್ಟು ನೋಡುವ ಅಭ್ಯಾಸವನ್ನು ಮತ್ತು ಯಾವುದೇ ಅತಿಯಾದ ನಿಯಮಗಳನ್ನು ಬಲವಂತವಾಗಿ ಈ ಮಕ್ಕಳ ಮೇಲೆ ಹೇರಬಾರದು ಎಂಬ ಎಚ್ಚರಿಕೆಯು ಈ ಚಿಕಿತ್ಸೆಯನ್ನು ನೀಡುವವರಲ್ಲಿ ಇರಬೇಕು.



ಶ್ರೀದೇವಿ ನರ್ಸಿಂಗ್, ಶ್ರೀ ರಮಣ ಮಹರ್ಷಿ ನರ್ಸಿಂಗ್, ಶ್ರೀ ದುರ್ಗಾಂಬಾ ನರ್ಸಿಂಗ್ ಆಫ್ ಸ್ಕೂಲ್ ಇವರ ವತಿಯಿಂದ ವಿಶ್ವ ಆಟಿಸಂ ದಿನಾಚರಣೆಯನ್ನು ಹಮ್ಮಿಕೊಳ್ಳಲಾಯಿತು. ಪ್ರಾಂಶುಪಾಲರಾದ ಆರ್ ಕೆ ಮುನಿಸ್ವಾಮಿ, ಪ್ರೊ. ಉಷಾ ಎಸ್, ಪ್ರೊ. ಅಂಬಾ ಹಾಗೂ ಡಾ. ಕೀರ್ತಿ ಕುಮಾರ್, ನರ್ಸಿಂಗ್ ಕಾಲೇಜಿನ ಬೋಧಕ ಬೋಧಕೇತರ ಸಿಬ್ಬಂದಿ ವರ್ಗದವರು ಹಾಜರಿದ್ದರು.

## ತುಮಕೂರಿಗೆ ಅಗತ್ಯವಿದೆ ಆಟಿಸಂ ಕೇಂದ್ರ

**ತುಮಕೂರು ಜಿಲ್ಲೆಯ ಅಗತ್ಯವನ್ನು ಪೂರೈಸಲು, ತುಮಕೂರಿನಲ್ಲಿ ಒಂದು ಆಟಿಸಂ ತರಬೇತಿ ಕೇಂದ್ರ ತೆರೆಯಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಲ್ಲಿ ಶ್ರೀದೇವಿ ಶಿಕ್ಷಣ ಸಂಸ್ಥೆ ಒತ್ತಾಯಿಸುತ್ತದೆ. ಇದರಿಂದ ಪ್ರಾಥಮಿಕ ಹಂತಗಳಲ್ಲಿಯೇ ಆಟಿಸಂನ ಸ್ಕ್ರೀನಿಂಗ್ ಮತ್ತು ಸೂಕ್ತ ಔಷಧೋಪಚಾರಗಳನ್ನು ನಡೆಸಲು ಅನುಕೂಲವಾಗುತ್ತದೆ. ಇದಲ್ಲದೆ ಆಟಿಸಂ ಪೀಡಿತರಾಗಿರುವ ಮಕ್ಕಳಿಗಾಗಿ ಒಂದು ಆಟಿಸಂ ಶಾಲೆಯ ಅಗತ್ಯವಿದೆ.**

**ಆಟಿಸಂ ಮಕ್ಕಳಿಗೆ ಸಹಾಯಕವಾಗುವ ಇತರ ವಿಷಯಗಳು**

- ಪ್ರತಿದಿನವೂ ದೈಹಿಕ ಚಟುವಟಿಕೆಗಳನ್ನು ನಿಯಮಿತವಾದ ರೀತಿಯಲ್ಲಿ ನಡೆಸುವಂತೆ ಮಾಡಿದರೆ ಅದರಿಂದ ಮಕ್ಕಳಿಗೆ ತಮ್ಮ ಗಮನವನ್ನು ಕೇಂದ್ರೀಕರಿಸಲು ಬಹಳ ಸಹಾಯವಾಗುತ್ತದೆ ಮತ್ತು ಅವರಲ್ಲಿರುವ ಅತಿಯಾದ ಭಾವನಾತ್ಮಕ ತುಡಿತವನ್ನು ಕಡಮೆ ಮಾಡುತ್ತದೆ.
- ಗಮನವನ್ನು ಕೇಂದ್ರೀಕರಿಸುವಂತೆ ಮತ್ತು ತಮ್ಮನ್ನು ತಾವು ಶಿಸ್ತಿಗೆ ಒಳಪಡಿಸಿಕೊಳ್ಳುವಂತೆ ಮಾಡಲು ಧ್ಯಾನ ಮಾಡುವ ಸರಳ ವಿಧಾನಗಳು ಉಪಯುಕ್ತವಾಗುತ್ತವೆ.
- ಆಹಾರತಜ್ಞರು ಸೂಚಿಸಿದ ಆಹಾರಗಳನ್ನು ಮತ್ತು ಪೋಷಕಾಂಶಗಳನ್ನು ನೀಡುವ ಮೂಲಕ, ಸಂಪೂರ್ಣವಾಗಿ ಅಲ್ಲವಾದರೂ, ತಕ್ಕಮಟ್ಟಿಗೆ ಮಕ್ಕಳಲ್ಲಿರುವ ಆಟಿಸಂ ಸಮಸ್ಯೆಯನ್ನು ಕಡಮೆ ಮಾಡಬಹುದು.

**ಶಾಲೆಗಳು ಮತ್ತು ತರಬೇತಿ ಕೇಂದ್ರಗಳು**

ಆಟಿಸಂ ಪೀಡಿತ ಮಕ್ಕಳಲ್ಲಿ ಬಹಳಷ್ಟು ಮಕ್ಕಳನ್ನು ವಿಶೇಷ ಅಥವಾ ಸಾಮಾನ್ಯ ಶಾಲೆಗೆ ಕಳುಹಿಸುತ್ತಾರೆ. ಇಂತಹ ಶಾಲೆಗಳಲ್ಲಿ ಮಕ್ಕಳಿಗೆ ಮುಂದಿನ ಸೌಲಭ್ಯಗಳು ಸಾಮಾನ್ಯವಾಗಿ ಸಿಗುತ್ತವೆ.

- ನುರಿತ ಉಪಾಧ್ಯಾಯರು ಮತ್ತು ಚಿಕಿತ್ಸಕರು.
- ಇಂತಹ ಮಕ್ಕಳ ವೈಯಕ್ತಿಕ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ನೆಯ್ದ ಪಠ್ಯಕ್ರಮಗಳು.
- ಚಿಕ್ಕಚಿಕ್ಕ ತರಗತಿಗಳು.
- ಕಲಿಕೆಯಲ್ಲಿ ಬಳಸಬಹುದಾದ ದೃಶ್ಯಮಾಧ್ಯಮ, ಆಟಿಕೆ ಮತ್ತು ವಸ್ತುಗಳು.

**ಪೋಷಕರು ಮತ್ತು ಕುಟುಂಬದ ಇತರರು ಅನುಸರಿಸಬೇಕಾದ ಅತಿ ಮುಖ್ಯವಾದ ನಿಯಮಗಳು:**

- ವಾಸ್ತವತೆಯನ್ನು ಸ್ವೀಕರಿಸಿ, ನಿಮ್ಮ ಗಮನವನ್ನು ಧನಾತ್ಮಕವಾಗಿ ಆಟಿಸಂ ಪೀಡಿತರ ಮೇಲೆ ಕೇಂದ್ರೀಕರಿಸಿ ಅವರಲ್ಲಿ ಪ್ರತಿಸ್ಪಂದನೆಯ ಶಕ್ತಿಯನ್ನು ಅವರಲ್ಲಿ ಬೆಳೆಸಿ.
- ಮಕ್ಕಳೊಡನೆ ಸಾಧ್ಯವಾದಷ್ಟೂ ಸತತವಾಗಿ ಸಂವಹನೆಯನ್ನು ಇಟ್ಟುಕೊಂಡಿರಿ. ಆಗ ಆ ಮಕ್ಕಳು ನಿಮಗೆ ಸ್ಪಂದಿಸುವುದನ್ನು ಶೀಘ್ರವಾಗಿ ಕಲಿಯುತ್ತಾರೆ.
- ಯಾವಾಗಲೂ ಮಕ್ಕಳ ಕಣ್ಣಲ್ಲಿಕಣ್ಣಿಟ್ಟು ಮಾತನಾಡಬೇಕು. ಅವರ ಮನಃಸ್ಥಿತಿಯನ್ನು ಶಾಂತಚಿತ್ತದಿಂದ ಚೆನ್ನಾಗಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕು. ಕೆಲವು ವೇಳೆ ನಿಮ್ಮ ಮಕ್ಕಳು ಮಾನಸಿಕವಾಗಿ ಕುಸಿದು ಹೋಗುತ್ತಾರೆ ಅಥವಾ ತೀವ್ರವಾದ ಭಾವನಾತ್ಮಕ ಒತ್ತಡಗಳಿಗೆ ಒಳಗಾಗುತ್ತಾರೆ. ಅಂತಹ ಸಂದರ್ಭಗಳಲ್ಲಿ ನೀವು ಶಾಂತಚಿತ್ತದಿಂದ ಪರಿಸ್ಥಿತಿಯನ್ನು ನಿಭಾಯಿಸಬೇಕು.
- ಯಾವುದೇ ರೀತಿಯ ಮಿಥ್ಯಾ ಮಾಹಿತಿಗಳಿಂದ ದೂರವಿರಿ ಮತ್ತು ವೃತ್ತಿನಿರತ ವೈದ್ಯರ ಸಲಹೆಯ ಪ್ರಕಾರ ವರ್ತಿಸಿ.
- ಮಗುವಿನ ಸಂವೇದನಾಶೀಲತೆಯ ಬಗೆಗೆ ಎಚ್ಚರಿಕೆಯಿಂದಿರಿ.
- ಮೃದುವಾದ ಮತ್ತು ಸರಳವಾದ ಭಾಷೆಯನ್ನು ಬಳಸಿ ಮಗುವಿನೊಂದಿಗೆ ಸಂವಹನವನ್ನು ನಡೆಸಿ.
- ಮನೆಯಲ್ಲಿ ನಿಮ್ಮನ್ನು ಅರ್ಥಮಾಡಿಕೊಳ್ಳಲು ಅನುಕೂಲವಾಗುವಂತಹ ಶಾಂತವಾತಾವರಣವನ್ನು ಮಗುವಿಗೆ ಕಲ್ಪಿಸಿಕೊಡಿ.
- ಭರವಸೆಯನ್ನು ಕಳೆದುಕೊಂಡು ನಿರಾಶರಾಗಬೇಡಿ. ಆಶಾವಾದಿಗಳಾಗಿರಿ.
- ಮಗುವು ಯಾವಾಗಲೂ ಯಾವುದರಲ್ಲಾದರೂ ತೊಡಗಿಕೊಂಡಿರುವಂತೆ ಮಾಡಿ.
- ಮೇಲೆ ಹೇಳಿರುವ ಚಿಕಿತ್ಸಾಕ್ರಮಗಳೆಲ್ಲವೂ ಸರಳವಾಗಿದ್ದು, ಅನುಸರಿಸಲು ಸುಲಭವಾಗಿವೆ.
- ಮಕ್ಕಳಿಗೆ ಮಾಡಲು ನೀಡುವ ಅಭ್ಯಾಸಗಳು ಅವರಿಗೆ ಸಂತೋಷಕರವಾಗಿರುವಂತೆ ನೋಡಿಕೊಳ್ಳಿ.
- ಮನೆಯ ವಾತಾವರಣವನ್ನು ಮಗುವು ಆನಂದಿಸಲು ಅನುಕೂಲವಾಗಿರುವಂತೆ ಮಾಡಿ.
- ಮಗುವಿಗೆ ನೀವು ತೋರುವ ಪ್ರೀತಿ ಮಗುವಿನ ಮನಸ್ಸಿನ ಮೇಲೆ ಅಪಾರ ಪ್ರಭಾವವನ್ನು ಬೀರಿ ಅದು ಮನೆಯಲ್ಲಿನ ಇತರರೊಡನೆ ಆಳವಾದ ಸಂಬಂಧವನ್ನು ಇಟ್ಟುಕೊಳ್ಳುವಂತೆ ಮಾಡುತ್ತದೆ. ಆದುದರಿಂದ ಮಗುವಿನ ಭಾವನೆಗಳನ್ನು ಅರ್ಥಮಾಡಿಕೊಂಡು ಅದಕ್ಕೆ ಪ್ರೀತಿಯನ್ನು ತೋರಿಸುತ್ತಿರಿ.
- ತೀವ್ರತರವಾದ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವ ಮಗುವಿನ ತುಡಿತವನ್ನು ಕಡಮೆ ಮಾಡಲು, ಸಕ್ಕರೆಯ ಅಂಶವಿರುವ ತಿನಿಸುಗಳನ್ನು ಹೆಚ್ಚಾಗಿ ನೀಡಬೇಡಿ.
- ನಿಧಾನವಾಗಿ, ಆದರೆ ಪ್ರತಿನಿತ್ಯವೂ, ಮಗುವು ಹೊಸ ಹೊಸ ಕೌಶಲವನ್ನು ಕಲಿಯುವಂತೆ ಮಾಡಿ.
- ಆಹಾರದ ಬಗೆಗೆ ಅನಗತ್ಯ ಆತುರವನ್ನು ನಿಯಂತ್ರಿಸುವಂತೆ ಹಾಗೂ ಮೂತ್ರವಿಸರ್ಜನೆಯ ಬಗೆಗೆ ಶಿಸ್ತನ್ನು ಅನುಸರಿಸುವಂತೆ ಮಾಡಿ.
- ಸಮಾಜಕ್ಕೆ ಹೊಂದಿಕೊಳ್ಳುವ, ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗಿಯಾಗುವಂತೆ ಸಂಯಮದಿಂದ ಪ್ರೋತ್ಸಾಹಿಸಿ.
- ತನ್ನ ಯೋಗಕ್ಷೇಮದ ಬಗೆಗೆ ತಾನೇ ಆಸಕ್ತಿ ವಹಿಸಿಕೊಳ್ಳುವುದನ್ನು ಮಗುವಿಗೆ ಕಲಿಸಬೇಕು.
- ಮಗುವು ಮೊಬೈಲನ್ನು ಹೆಚ್ಚು ಬಳಸದಂತೆ ಮಾಡಿ.
- ಮಗುವಿನಲ್ಲಿ ಕಂಡುಬರುವ ಯಾವುದೇ ಪ್ರಗತಿಯು– ಪ್ರಮಾಣದಲ್ಲಿ ಅದು ಚಿಕ್ಕದಿರಲಿ ಅಥವಾ ದೊಡ್ಡದಿರಲಿ – ಬಹಳ ಮಹತ್ವದ್ದಾಗಿರುತ್ತದೆ. ನೀವು ಮಗುವಿಗೆ ಕೊಡುವ ಪ್ರೋತ್ಸಾಹವು, ಹೊಗಳಿಕೆಯು ಅದರ ಮನೋಸ್ಥೈರ್ಯವನ್ನು ಬಲಪಡಿಸುತ್ತದೆ.

**ಮಗುವಿನ ಆರೋಗ್ಯ ರಕ್ಷಣೆಯ ಜವಾಬ್ದಾರಿಯನ್ನು ಹೊತ್ತಿರುವವರು ಅನುಸರಿಸಬೇಕಾದ ಅತಿ ಮುಖ್ಯವಾದ ನಿಯಮಗಳು:**

ಮಗುವಿನ ಸಮಸ್ಯೆಗಳನ್ನು ನಿವಾರಿಸುವಲ್ಲಿ ದಾದಿಯರು ಮತ್ತು ಆರೋಗ್ಯ ಸೇವೆಯಲ್ಲಿ ನಿರತರಾಗಿರುವ ಇತರರು ಅತ್ಯಂತ ಪ್ರಮುಖ ಪಾತ್ರವನ್ನು ವಹಿಸುತ್ತಾರೆ. ಅವರು ಅನುಸರಿಸಬೇಕಾದ ನಿಯಮಗಳು ಹೀಗಿವೆ:

- ಆಟಿಸಂ ಸಮಸ್ಯೆಗಳ ಬಗೆಗೆ ಪೋಷಕರು ಮತ್ತು ಕುಟುಂಬದ ಇತರರಿಗೆ ಸಂಪೂರ್ಣ ಮಾಹಿತಿಯನ್ನು ನೀಡಿ ಮತ್ತು ಅವರು ತೆಗೆದುಕೊಳ್ಳಬೇಕಾದ ಎಚ್ಚರಿಕೆಯ ಕ್ರಮಗಳನ್ನು ತಿಳಿಸಿ.
- ಮಗುವಿನಲ್ಲಿ ಆಟಿಸಮ್ಮಿನ ಲಕ್ಷಣಗಳು ಕಾಣಿಸಿಕೊಂಡ ತಕ್ಷಣ ಅವುಗಳನ್ನು ಗಮನಿಸಿ ವೈದ್ಯಕೀಯ ನೆರವನ್ನು ಪಡೆಯುವ ಅಗತ್ಯದ ಬಗೆಗೆ ತಿಳಿಸಲು ಬೇಕಾದ ತಿಳಿವಳಿಕೆಯನ್ನು ನೀಡಿ. ಆದಷ್ಟು ಬೇಗ ಮಗುವನ್ನು ಸ್ಕ್ರೀನಿಂಗಿಗೆ ಒಳಪಡುವಂತೆ ಮಾಡಿ.
- ಶಿಶುರೋಗ ತಜ್ಞರು, ನರರೋಗ ತಜ್ಞರು, ವಾಕ್ಚಿಕಿತ್ಸಕರು, ಮನೋರೋಗ ತಜ್ಞರು ಮೊದಲಾದ ವಿಶೇಷ ತಜ್ಞರಿಂದ ಸಲಹೆ ಮತ್ತು ಸೂಚನೆಗಳನ್ನು ಪಡೆಯುತ್ತಿರಿ.
- ಪ್ರತಿಯೊಂದು ಪ್ರಕರಣವನ್ನೂ, ಅವುಗಳ ಗಾಂಭೀರ್ಯಕ್ಕೆ ತಕ್ಕಂತೆ ನಿಭಾಯಿಸಿ.
- ಮಾತಿನ ಮೂಲಕ ಸಂವಹನೆ ಸಾಧ್ಯವಾಗದಿರುವ ಅಥವಾ ಸಾಧ್ಯವಿದ್ದರೂ ಅದಕ್ಕೆ ಪೂರಕವಾಗಿ, ಚಿತ್ರಗಳು ಮತ್ತು ಚಿಹ್ನೆಗಳನ್ನು ಬಳಸಿ ಮಗುವಿನೊಡನೆ ಸಂವಹನ ಕ್ರಿಯೆಯನ್ನು ನಡೆಸುತ್ತಿರಿ.
- ಮಕ್ಕಳಲ್ಲಿ ಕಾಣಿಸಿಕೊಳ್ಳಬಹುದಾದ ಆಟಿಸಮ್ಮಿನ ಲಕ್ಷಣಗಳನ್ನು ಗುರುತಿಸುವಂತೆ ಅಂಗನವಾಡಿ ನೌಕರರಿಗೆ ತರಬೇತಿಯನ್ನು ನೀಡಿ.
- ಮಧ್ಯೆ ಮಧ್ಯೆ, ವರ್ತನಾ ಚಿಕಿತ್ಸೆಯನ್ನು ಮಗುವಿಗೆ ನೀಡುವಲ್ಲಿ ಸಹಾಯ ಮಾಡಿ.
- ಅಗತ್ಯವಾದ ಎಲ್ಲ ಬಗೆಯ ಚಿಕಿತ್ಸಾ ಕ್ರಮಗಳನ್ನೂ ಪಡೆಯುವಂತೆ ಪೋಷಕರಿಗೆ ತಿಳುವಳಿಕೆ ನೀಡಿ.
- ಶಿಶುರೋಗ ತಜ್ಞರು, ಚಿಕಿತ್ಸಕರು, ವಿಶೇಷ ಶಿಕ್ಷಣವನ್ನು ನೀಡುವವರು ಮೊದಲಾದ ಹಲವು ವಿಧದ ಶಾಖೆಯವರ ಸಹಯೋಗವನ್ನು ಪಡೆದುಕೊಳ್ಳಿ.
- ಮಗುವಿನ ಕುಟುಂಬ ವರ್ಗದವರ ಉತ್ಸಾಹವನ್ನು ವರ್ಧಿಸುವ ರೀತಿಯಲ್ಲಿ ಕೆಲಸ ಮಾಡಿ ಮತ್ತು ಅವರಲ್ಲಿ ಯಾವಾಗಲೂ ಮಗುವಿನ ಬಗೆಗೆ ಧನಾತ್ಮಕವಾದ ಭಾವನೆ ಹಾಗೂ ಆಶಾವಾದವನ್ನು ತುಂಬುತ್ತಿರಿ.

**ಸಮಾಜದ ಜವಾಬ್ದಾರಿ**

ಆಟಿಸಮ್ಮಿನಿಂದ ಪೀಡಿತರಾಗಿರುವವರೂ ನಮ್ಮ ಸಮಾಜದ ಒಂದು ಅಂಗವೇ ಆಗಿರುತ್ತಾರೆ. ಅವರೊಡನೆ ಗೌರವ ಮತ್ತು ಅನುಕಂಪದಿಂದ ವರ್ತಿಸಿ. ಶಾಲೆಗಳು, ಕೆಲಸದ ತಾಣಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಆಟಿಸಂ ಮಕ್ಕಳನ್ನು ಸುಗಮವಾಗಿ ಒಳಗೊಳ್ಳುವಂತಹ ವ್ಯವಸ್ಥೆ ಇರುವಂತೆ ಸಮಾಜವು ಮಾಡಬೇಕು.

Printed and Published by **Shridevi Media Center,** Lingapura, NH 4, Sira Road, Tumakuru - 572106, Mob: 94480 82844 and
Printed at **Maruthi Printing Press,** No.90/6-1. 1st cross, Vittal Nagar West, Near Marvel Apartment, Bengaluru-560026. Editor: **Dr M R Hulinaykar**